
ನಿಮ್ಮ ಯೋಜನೆಯನ್ನು ತಿಳಿದುಕೊಳ್ಳಿ

# ಕಾರ್ಮಿಕರ ಕೈಪಿಡಿ




ಕಾರ್ಮಿಕರ ರಾಜ್ಯ ವಿಮಾ ನಿಗಮ, ಕರ್ನಾಟಕ

11345
11345



... ಪ್ರಿಯ ವಿಮಾದಾರರೆ

## ನಿಮಗೆ ನೆರವಾಗಲು ನಮಗೆ ನೆರವಾಗಿ

### ದಯಮಾಡಿ...

- ವೈದ್ಯಕೀಯ ಅಥವಾ ಇನ್ನಿತರೆ ಯಾವುದೇ ಸೌಲಭ್ಯ ಪಡೆಯುವ ಉದ್ದೇಶದಿಂದ ಅನರ್ಹ ವ್ಯಕ್ತಿಗಳ ಹೆಸರನ್ನು ನಿಮ್ಮ ಘೋಷಣಾ ಪತ್ರ (Declaration Form)ದಲ್ಲಿ ಸೇರಿಸಬೇಡಿ.
- ನಿಮ್ಮ ಗುರುತಿನ ಚೀಟಿಯನ್ನು ಹಾಳು ಮಾಡಬೇಡಿ ಹಾಗೂ ಅದರೊಳಗಿರುವ ವಿವರಗಳನ್ನು ತಿದ್ದುಪಡಿ ಮಾಡಬೇಡಿ.
- ನಿಮ್ಮ ಗುರುತಿನ ಚೀಟಿಯನ್ನು ಬೇರೆಯವರಿಗೆ ಎರವಲು ಕೊಡಬೇಡಿ.
- ಯಾವುದೇ ಹಿತಲಾಭ ಪಡೆಯಲು ಖಾಯಿಲೆ ಅಥವಾ ಗಾಯವಾಗಿದೆ ಎಂದು ಸುಳ್ಳು ಮಾಹಿತಿ ನೀಡಬೇಡಿ.
- ಸುಳ್ಳು ಪ್ರಮಾಣ ಪತ್ರ ನೀಡಲು ನಿಮ್ಮ ವೈದ್ಯರನ್ನು ಒತ್ತಾಯಿಸಬೇಡಿ.
- ಇ.ಎಸ್.ಐ. ಹಿತಲಾಭಗಳನ್ನು ಪಡೆಯಲು ಯಾವುದೇ ದಲ್ಲಾಳಿ ಅಥವಾ ಮಧ್ಯವರ್ತಿಯ ಮೊರೆ ಹೋಗಬೇಡಿ.
- ನಿಮ್ಮ ವೈದ್ಯಕೀಯ ಪ್ರಮಾಣ ಪತ್ರವನ್ನು ತಿದ್ದಬೇಡಿ.
- ಯಾವುದೇ ಇ.ಎಸ್.ಐ.ಸಿ. ಫಾರ್ಮ್‌ಗಳಿಗಾಗಿ ಹಣ ನೀಡಬೇಡಿ. ಅವು ಶಾಖಾ ಕಾರ್ಯಾಲಯಗಳಲ್ಲಿ ಉಚಿತವಾಗಿ ದೊರೆಯುತ್ತವೆ.
- ನಿಮ್ಮ ಕುಟುಂಬದಲ್ಲಿ ಜನನ/ಮರಣ ಸಂಭವಿಸಿದಲ್ಲಿ, ಕುಟುಂಬದ ಸದಸ್ಯರ ಹೆಸರನ್ನು ಘೋಷಣಾ ಪತ್ರದಲ್ಲಿ ಸೇರಿಸಲು / ತೆಗೆದುಹಾಕಿಸಲು ಮರೆಯಬೇಡಿ.
- ನಿಮ್ಮ ಕಾರ್ಯವ್ಯಾಪ್ತಿಯ ಸ್ಥಳದಿಂದ ಹೊರಗೆ ಪ್ರಯಾಣ ಮಾಡುವಾಗ ನಿಮ್ಮ ಮಾಲೀಕರಿಂದ ಸಹಿ ಹೊಂದಿದ ಫಾರ್ಮ್-105ನ್ನು ಪಡೆಯಲು ಮರೆಯಬೇಡಿ. ಇದು ನಿಮಗೆ ಬೇರೆ ಊರು ಹಾಗೂ ರಾಜ್ಯಗಳಲ್ಲೂ ಇ.ಎಸ್.ಐ. ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡುತ್ತದೆ.

ಪ್ರಿಯ ವಿಮಾದಾರರೆ,

ಭಾರತದಲ್ಲಿ ಕೇವಲ ಇ.ಎಸ್.ಐ. ಯೋಜನೆಯೊಂದೇ ಬಹು ಆಯಾಮಗಳಿರುವ ಮಹತ್ವಪೂರ್ಣವಾದ ಹಾಗೂ ಫಲಾನುಭವಿಗಳಿಗೆ ಸಮಗ್ರ ವೈದ್ಯಕೀಯ ಸೇವೆ ಒದಗಿಸುವ ಅತಿ ಉಪಯುಕ್ತ ಸಾಮಾಜಿಕ ಕಾರ್ಯನಿರ್ವಹಿಸುವ ಹಾಗೂ ವೇತನ ಕಡಿತಕ್ಕೆ ಕಾರಣವಾಗುವಂತಹ ಅಥವಾ ಗಳಿಕೆಯ ಸಾಮರ್ಥ್ಯಕ್ಕೆ ಕುಂದುಂಟು ಮಾಡುವಂತಹ ಘಟನೆಗಳಿಂದ ಕಾರ್ಮಿಕರಿಗೆ ಸುರಕ್ಷೆ ಒದಗಿಸುವಂತಹ ಸಾಮಾಜಿಕ ಸುರಕ್ಷಾ ಯೋಜನೆಯಾಗಿದೆ ಎಂದು ನಿಮಗೆ ತಿಳಿಸಲು ಹೆಮ್ಮೆ ಎನ್ನಿಸುತ್ತಿದೆ. ಈ ಯೋಜನೆಯು ವೃತ್ತಿಯಿಂದ ಉಂಟಾದ ಖಾಯಿಲೆಗಳಿಂದ ಅಥವಾ ವೃತ್ತಿಯಿಂದ / ವೃತ್ತಿಯಲ್ಲಿರುವಾಗ ಸಂಭವಿಸಿದ ಅಪಘಾತಗಳಿಂದ ಮೃತಪಟ್ಟ ನೌಕರರ ಅವಲಂಬಿತರಿಗೆ ಆರ್ಥಿಕ ಸಹಾಯ ನೀಡುವುದರ ಮೂಲಕ ಸಹಾಯ ಮಾಡುತ್ತದೆ.

ನೌಕರರ ರಾಜ್ಯ ವಿಮಾ ನಿಗಮವು ತನ್ನ ವ್ಯಾಪ್ತಿಯ ಪ್ರದೇಶದಲ್ಲಿ ವೈದ್ಯಕೀಯ ಸೇವೆ ಹಾಗೂ ನಗದು ಹಿತಲಾಭಗಳು ಸುಲಭವಾಗಿ ಸಿಗುವಂತಾಗಲು ಇ.ಎಸ್.ಐ. ಆಸ್ಪತ್ರೆ, ರೋಗ ಪತ್ತೆ ಹಚ್ಚುವ ಕೇಂದ್ರ (Diagnostic Centres) ಚಿಕಿತ್ಸಾಲಯ ಹಾಗೂ ಶಾಖಾ ಕಛೇರಿಗಳಂತಹ ಸುಮಾರು 5000ಕ್ಕೂ ಹೆಚ್ಚು ಸೇವಾ ಕೇಂದ್ರಗಳನ್ನು ಹೊಂದಿದೆ.

ಒಟ್ಟಾರೆ ಆರೋಗ್ಯ ವಿಮೆಯ ಕ್ಷೇತ್ರದಲ್ಲಿ ನಿಮ್ಮ ಲಭ್ಯವಿರುವ ಸೌಲಭ್ಯಗಳು, ಪ್ರಯೋಜನಗಳು ಹಾಗೂ ನೀವು ಅನುಸರಿಸಬೇಕಾದ ವಿಧಿ-ವಿಧಾನ (procedures)ಗಳು ಹಾಗೂ ಇ.ಎಸ್.ಐ. ಕಾಯ್ದೆಯನ್ವಯ ನಿಮ್ಮ ಕರ್ತವ್ಯ (obligation)ಗಳನ್ನು ತಿಳಿದುಕೊಳ್ಳುವುದು ಅವಶ್ಯವಾಗಿದೆ. ಈ ಯೋಜನೆಯಡಿ ಲಭ್ಯವಿರುವ ಹಿತಲಾಭಗಳು, ಅವುಗಳನ್ನು ಪಡೆಯಲು ಬೇಕಾದ ವಂತಿಗೆಯ ನಿಯಮಗಳು ಹಾಗೂ ವಿಧಿ-ವಿಧಾನಗಳ ಬಗ್ಗೆ ನಿಮಗೆ ಅವಶ್ಯಕವಾದ ಮಾಹಿತಿಯನ್ನು ನೀಡಲು ಈ ಕಿರು ಹೊತ್ತಿಗೆಯನ್ನು ಸಿದ್ಧಪಡಿಸಲಾಗಿದೆ.

ಈ ಸಂಬಂಧವಾಗಿ ತಲೆದೋರಬಹುದಾದ ಎಲ್ಲಾ ಸಮಸ್ಯೆಗಳನ್ನೂ ಮುಂಚಿತವಾಗಿ ಯೋಚಿಸಿ, ಉತ್ತರ ಹಾಗೂ ಪರಿಹಾರಗಳನ್ನು ತಿಳಿಯಪಡಿಸುವುದು ಈ ಕಿರು ಹೊತ್ತಿಗೆಯ ಮೂಲಕ ಸಾಧ್ಯವಿಲ್ಲವೆನ್ನುವುದೂ ನಿಜ. ಒಂದುವೇಳೆ, ನಿಮಗೆ ಅಥವಾ ನಿಮ್ಮ ಯಾರೇ ಸಹೋದ್ಯೋಗಿಗೆ ಈ ಯೋಜನೆಯ ನಿರ್ವಹಣೆ ಅಥವಾ ವಿಧಿವಿಧಾನದ ಬಗ್ಗೆ ಯಾವುದೇ ಸಂದೇಹ ಉಂಟಾದಲ್ಲಿ ನಿಮ್ಮ ಪ್ರದೇಶದ ಶಾಖಾ ಕಾರ್ಯಾಲಯ ಪ್ರಬಂಧಕರನ್ನಾಗಲೀ ಅಥವಾ ಚಿಕಿತ್ಸಾಲಯದ ವೈದ್ಯಕೀಯ ಮುಖ್ಯಾಧಿಕಾರಿಯನ್ನಾಗಲೀ ಸಂಪರ್ಕಿಸಬಹುದಾಗಿದೆ.

ಸದಾ ತಮಗೆ ಅತ್ಯುತ್ತಮ ಸೇವೆಯ ಭರವಸೆ ನೀಡುತ್ತಲಿರುವ,

ಇ.ಎಸ್.ಐ.ಸಿ. ಮುಖ್ಯ ಕಾರ್ಯಾಲಯ — ತಮ್ಮದೇ ಆದ

ನವದೆಹಲಿ — —ಇಎಸ್‌ಐಸಿ

24.2.2007

## ಸದಾ ನೆನಪಿಡಬೇಕಾದ ಕೆಲವು ಅಂಶಗಳು

1. ನಿಮ್ಮ ವೈದ್ಯರ ಸಲಹೆ / ಸೂಚನೆಗಳನ್ನು ತಪ್ಪದೆ ಪಾಲಿಸಿ.
2. ವೈದ್ಯರ ಅನುಮತಿ ಇಲ್ಲದೆಯೇ ನೀವು ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವ ಪ್ರದೇಶದಿಂದ ಬೇರೆಡೆ ಹೋಗಬೇಡಿ.
3. ಅನವಶ್ಯಕವಾಗಿ ವೈದ್ಯರ ಸಮಯವನ್ನು ಹಾಳು ಮಾಡಬೇಡಿ.
4. ಚಿಕಿತ್ಸಾ ನಿರ್ದೇಶಕರ (Medical Referee) ಮುಂದೆ, ನಿಗದಿತ ದಿನಾಂಕ ಹಾಗೂ ವೇಳೆಯಂದು ಹಾಜರಾಗುವುದನ್ನು ತಪ್ಪಿಸಬೇಡಿ.
5. ಅನಾರೋಗ್ಯದಿಂದಾಗಿ ನೀವು ಕೆಲಸಕ್ಕೆ ಹಾಜರಾಗುವುದು ಸಾಧ್ಯವಾಗದಿದ್ದಾಗ ಮಾತ್ರ ವೈದ್ಯಕೀಯ ಪ್ರಮಾಣ ಪತ್ರ ಪಡೆಯಿರಿ.
6. ನಿಮ್ಮ ಗುರುತಿನ ಚೀಟಿಯನ್ನು ಜಾಗರೂಕತೆಯಿಂದ ಕಾಪಾಡಿ. ನಿಮ್ಮ ವೈದ್ಯರಿಂದ ವೈದ್ಯಕೀಯ ಸೇವೆ ಪಡೆಯುವಾಗ ಹಾಗೂ ಶಾಖಾ ಕಾರ್ಯಾಲಯದಿಂದ ನಗದು ಹಿತಲಾಭ ಪಡೆಯುವಾಗ ಅದನ್ನು ತಪ್ಪದೆ ತೆಗೆದುಕೊಂಡು ಹೋಗಿ.
7. ನಿಮ್ಮ ವೈದ್ಯಕೀಯ ಪ್ರಮಾಣ ಪತ್ರಗಳಲ್ಲಿ ತಿದ್ದುಪಡಿ ಮಾಡಬೇಡಿ.
8. ನಿಮ್ಮ ಕೋರಿಕೆ ಫಾರ್ಮ್ (Claim Form)ಗಳಲ್ಲಿ ವಿವರಗಳನ್ನು ಸರಿಯಾಗಿ ತುಂಬಿ ಹಾಗೂ ನಗದು ಹಿತಲಾಭ ಪಡೆಯಲು ಕೋರಿಕೆ ಫಾರ್ಮ್‌ನಲ್ಲಿ ಸುಳ್ಳು ವಿವರ/ ಘೋಷಣೆಗಳನ್ನು ಮಾಡಬೇಡಿ.
9. ನಿಮ್ಮ ಇಎಸ್‌ಐಸಿ ಗುರುತಿನ ಚೀಟಿಯನ್ನು ಬೇರೆ ಯಾರಿಗೂ ವೈದ್ಯಕೀಯ ಚಿಕಿತ್ಸೆ ಪಡೆಯಲು ಎರವಲು ಕೊಡಬೇಡಿ. ಇದೊಂದು ಶಿಕ್ಷಾರ್ಹ ಅಪರಾಧವಾಗಿರುತ್ತದೆ.
10. ನೀವು ಬೇರೆ ಸ್ಥಳಗಳಿಗೆ ಹೋಗುವಾಗ, ನೀವು ವಿಮೆ ಇರುವ ನೌಕರಿಯಲ್ಲಿರುವ ಬಗ್ಗೆ ಫಾರ್ಮ್ 105ರಲ್ಲಿ ನಿಮ್ಮ ಮಾಲೀಕರಿಂದ ಪ್ರಮಾಣ ಪತ್ರ ಪಡೆಯುವುದನ್ನು ಮರೆಯಬೇಡಿ. ಇದನ್ನು ತೋರಿಸುವುದರಿಂದ ಯಾವುದೇ ಇಎಸ್‌ಐ ಸಂಸ್ಥೆಯಲ್ಲಿ ನೀವು ವೈದ್ಯಕೀಯ ಸೌಲಭ್ಯ ಪಡೆಯಬಹುದು.
11. ಶಾಖಾ ಕಾರ್ಯಾಲಯದಿಂದ ನಗದು ಹಿತಲಾಭವನ್ನು ಪಡೆಯುವಾಗ ನಿಮಗೆ ಬರಬೇಕಾದ ಹಣದ ಮೊತ್ತವನ್ನು ಖಚಿತಪಡಿಸಿಕೊಳ್ಳಿ ಹಾಗೂ ನಗದು ಹಣದ ಕೌಂಟರ್‌ನಿಂದ ಹೊರಬರುವ ಮುನ್ನ ಹಣವನ್ನು ಎಣಿಸಿ ಖಚಿತಪಡಿಸಿಕೊಳ್ಳಿ.
12. ನಿಮಗೆ ಯಾವುದೇ ಸಂದೇಹವಿದ್ದಲ್ಲಿ ಅಥವಾ ಸ್ಪಷ್ಟೀಕರಣ ಬೇಕಾಗಿದ್ದಲ್ಲಿ ಶಾಖಾ ಕಾರ್ಯಾಲಯದ ಮುಖ್ಯಸ್ಥರನ್ನು ಅಥವಾ ಚಿಕಿತ್ಸಾಲಯದ ಮುಖ್ಯಸ್ಥರನ್ನು ಸಂಪರ್ಕಿಸಿ.

– ಇಎಸ್‌ಐಸಿ

# ಪರಿವಿಡಿ


| ವಿವರ | | ಪುಟ ಸಂಖ್ಯೆ |
|---|---|---|
| 1. | ಕಾ.ರಾ.ವಿ. ಯೋಜನೆ - ಮೂಲಭೂತ ಅಂಶಗಳು | 1-3 |
| 2. | ನೋಂದಣಿ - ವಂತಿಗೆ ಇತ್ಯಾದಿ | 4-6 |
| 3. | ಸಾಮಾಜಿಕ ಸುರಕ್ಷೆಯ ಹಿತಲಾಭಗಳು | 7 |
| ಅ) | ಕಾಯಿಲೆಯ ಹಿತಲಾಭ | 7 |
| ಆ) | ವಿಸ್ತರಿತ ಕಾಯಿಲೆ ಹಿತಲಾಭ | 8-9 |
| ಇ) | ವರ್ಧಿತ ಕಾಯಿಲೆ ಹಿತಲಾಭ | 10-11 |
| ಈ) | ಅಂಗವಿಕಲತೆಯ ಹಿತಲಾಭ | 11-17 |
| ಉ) | ಆಶ್ರಿತರ ಹಿತಲಾಭ | 17-18 |
| ಊ) | ಮಾತೃತ್ವದ ಹಿತಲಾಭ | 18-20 |
| ಋ) | ವೈದ್ಯಕೀಯ ಹಿತಲಾಭ | 21-22 |
| ೠ) | ಅಂತ್ಯಕ್ರಿಯೆ ವೆಚ್ಚಗಳು | 23-24 |
| 4. | ಇತರ ಸೌಲಭ್ಯಗಳು | 25-26 |
| 5. | ನಿಗದಿತ ಕಾಯಿಲೆ ಹಿತಲಾಭದ ದರಗಳು (ಅನುಬಂಧ-ಅ) | 27 |


**ಸಾಮಾಜಿಕ ನ್ಯಾಯಕ್ಕಾಗಿ ಸಾಮಾಜಿಕ ಸುರಕ್ಷೆ**

# ವೆಬ್‌ಸೈಟ್‌ನಲ್ಲಿ ಇ.ಎಸ್.ಐ.ಸಿ. ಫಾರ್ಮ್‌ಗಳು

ಮಾಲೀಕರು / ನೌಕರರು / ವಿಮಾದಾರರ ಅನುಕೂಲಕ್ಕಾಗಿ ಈ ಕೆಳಗಿನ ಇಎಸ್‌ಐಸಿ ಫಾರ್ಮ್‌ಗಳನ್ನು ಇಎಸ್‌ಐಸಿ ವೆಬ್‌ಸೈಟ್‌ನಿಂದ www.esickar.gov.in or www.esic.nic.in ಡೌನ್ ಲೋಡ್ ಮಾಡಬಹುದಾಗಿದೆ.

## ಉದ್ಯೋಗದಾತರಿಗಾಗಿ (for Employers)

| | | |
|---|---|---|
| ಫಾರಂ, 01 | — | ಉದ್ಯೋಗದಾತರ ನೊಂದಣಿ ಫಾರಂ |
| ಫಾರಂ, 01ಎ | — | ಕಾರ್ಖಾನೆ / ಸಂಸ್ಥೆಯ ವಾರ್ಷಿಕ ಮಾಹಿತಿ ಸಲ್ಲಿಕೆ |
| ಫಾರಂ 3 | — | ಘೋಷಣಾಪತ್ರಗಳ ರಿಟರ್ನ್ ಫಾರಂ (ವಿವರ) ನಮೂನೆ |
| ಫಾರಂ - 5 | — | ವಂತಿಗೆಯ ವಿವರಗಳ ನಿಗದಿತ ಫಾರಂ ನಮೂನೆ |
| ಫಾರಂ - 5ಎ | — | ವಂತಿಗೆಯ ಮುಂಗಡ ಪಾವತಿಯ ವಿವರಣೆ |
| ಫಾರಂ - 6 | — | ನೌಕರರ ರಿಜಿಸ್ಟರ್ |
| ಫಾರಂ - 10 | — | ಗೈರು ಹಾಜರಿಯ ಪರಿಶೀಲನೆ |
| ಫಾರಂ - 11 | — | ಅಪಘಾತದ ರಿಜಿಸ್ಟರ್ |

## ನೌಕರರಿಗಾಗಿ (for Employees)

| | | |
|---|---|---|
| ಫಾರಂ - 1 | — | ಘೋಷಣಾಪತ್ರ |
| ಫಾರಂ - 2 | — | ಕುಟುಂಬದಲ್ಲಿ ಆದ ಬದಲಾವಣೆ ಬಗ್ಗೆ ಘೋಷಣಾಪತ್ರ |
| ಫಾರಂ - 9 | — | ಕಾಯಿಲೆ / ತಾತ್ಕಾಲಿಕ ಅಂಗವಿಕಲತೆ / ಮಾತೃತ್ವದ ಹಿತಲಾಭದ ಕೋರಿಕಾ ಪತ್ರ ನಮೂನೆ |
| ಫಾರಂ - 12 | — | ಉದ್ಯೋಗದಾತರು ಸಲ್ಲಿಸಬೇಕಾದ ಅಪಘಾತದ ವರದಿ ಪತ್ರ |
| ಫಾರಂ - 14 | — | ಶಾಶ್ವತ ಅಂಗವಿಕಲತೆಗೆ ಆರ್ಥಿಕ ಸೌಲಭ್ಯ ಕೋರಿ ಸಲ್ಲಿಸುವ ಪತ್ರದ ನಮೂನೆ |
| ಫಾರಂ - 15 | — | ಆಶ್ರಿತರ ಸೌಲಭ್ಯ ಕೋರಿಕಾ ಪತ್ರ ನಮೂನೆ |
| ಫಾರಂ - 16 | — | ಆಶ್ರಿತರು ಮಾಹೆಯಾನ ಸೌಲಭ್ಯ ಕೋರಿ ಸಲ್ಲಿಸಬೇಕಾದ ಪತ್ರ ನಮೂನೆ |
| ಫಾರಂ - 19 | — | ಮಾತೃತ್ವದ ಆರ್ಥಿಕ ಸೌಲಭ್ಯಕ್ಕಾಗಿ ಸಲ್ಲಿಸುವ ಕೋರಿಕಾ ಪತ್ರ ನಮೂನೆ. |
| ಫಾರಂ - 20 | — | ಮಗುವಿನ ನಿಧನದ ನಂತರ ಮಾತೃತ್ವದ ಹಿತಲಾಭದ ಕೋರಿಕಾಪತ್ರ |
| ಫಾರಂ - 22 | — | ಅಂತಿಮ ಸಂಸ್ಕಾರದ ವೆಚ್ಚದ ಕೋರಿಕಾ ಪತ್ರ |
| ಫಾರಂ - 23 | — | ಜೀವಂತ ಇರುವ ಬಗ್ಗೆ ದೃಢೀಕರಣ ಪತ್ರ |
| ಫಾರಂ - 24 | — | ಆಶ್ರಿತರ ಘೋಷಣೆ ಮತ್ತು ಆಶ್ರಿತರು ಎಂಬ ಬಗ್ಗೆ ನೀಡಿದ ಪ್ರಮಾಣ ಪತ್ರ. |

# ಭಾರತದ ಕಾರ್ಮಿಕರ ರಾಜ್ಯ ವಿಮಾ ಯೋಜನೆ

## ಮೂಲಭೂತ ಅಂಶಗಳು

### 1. ಇ.ಎಸ್.ಐ. ಯೋಜನೆ ಎಂದರೇನು ?

☞ ಆಹಾರ, ವಸ್ತ್ರ ವಸತಿ ಇತ್ಯಾದಿ ಅವಶ್ಯಕತೆಗಳಲ್ಲದೆ, ಕಾಯಿಲೆ ಹಾಗೂ ಅಂಗವಿಕಲತೆ ಇತ್ಯಾದಿಗಳಿಂದಾಗಿ ದೈಹಿಕ ಹಾಗೂ ಆರ್ಥಿಕ ಸಂಕಟಗಳ ಸಮಯದಲ್ಲಿ ಮಾನವನಿಗೆ ಸುರಕ್ಷೆ ಅವಶ್ಯಕವೆನಿಸುತ್ತದೆ. ನೌಕರರ ರಾಜ್ಯ ವಿಮಾ ಯೋಜನೆಯು ಇ.ಎಸ್.ಐ. ಕಾಯಿದೆಯಲ್ಲಿ ಸಾಕಾರಗೊಂಡಿರುವ ಸಾಮಾಜಿಕ ವಿಮೆಯ ಸಮಗ್ರ ಯೋಜನೆಯಾಗಿದೆ ಹಾಗೂ ಇ.ಎಸ್.ಐ. ಕಾಯಿದೆಯನ್ವಯ ನಿರೂಪಿಸಿದ 'ವಿಮಾದಾರನಿಗೆ/ಳಿಗೆ ಕಾಯಿಲೆ, ಹೆರಿಗೆ, ಅಂಗವಿಕಲತೆ ಹಾಗೂ ವೃತ್ತಿನಿರತರಾಗಿರುವಾಗ ಸಂಭವಿಸಿದ ಅಪಘಾತದಿಂದ ಉಂಟಾಗುವ ಸಾವಿನಂತಹ ಆಕಸ್ಮಿಕ / ಅವಗಢಗಳಿಂದ ಸುರಕ್ಷೆ ಒದಗಿಸುವ ಕಾರ್ಯ ಸಾಧಿಸಲು ರೂಪಿಸಲಾಗಿದೆ. ಈ ಯೋಜನೆಯು ಋತು-ಆಧಾರಿತವಲ್ಲದ, ವಿದ್ಯುಚ್ಛಕ್ತಿ ಅಥವಾ ಇನ್ನಿತರೆ ಶಕ್ತಿ (power) ಬಳಸುವ ಹತ್ತು ಅಥವಾ ಹತ್ತಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಾರ್ಖಾನೆಗಳಿಗೆ ಅಥವಾ ಉತ್ಪಾದನಾ ಘಟಕಗಳಿಗೆ ಅನ್ವಯವಾಗುತ್ತದೆ. ಇದಲ್ಲದೆ, ಈ ಯೋಜನೆಯನ್ನು ಕೃಷಿ, ವಾಣಿಜ್ಯ, ಕೈಗಾರಿಕೆ ಹಾಗೂ ಇನ್ನಿತರೆ ಘಟಕಗಳಿಗೆ / ಸಂಸ್ಥೆಗಳಿಗೆ ಕೂಡ ವಿಸ್ತರಿಸುವ ಸೌಲಭ್ಯವಿದೆ. ಈ ಯೋಜನೆಯನ್ನು ವಿದ್ಯುಚ್ಛಕ್ತಿ ಅಥವಾ ಇತರ ಇಂಧನ ಉಪಯೋಗಿಸದ, 20ಕ್ಕೂ ಹೆಚ್ಚು ನೌಕರರಿರುವ ಉತ್ಪಾದನಾ ಘಟಕ ಹಾಗೂ ಕಾರ್ಖಾನೆಗಳಿಗೂ ಕೂಡ ಯಶಸ್ವಿಯಾಗಿ ವಿಸ್ತರಿಸಲಾಗಿದೆ.

### 2. ನೌಕರರ ರಾಜ್ಯ ವಿಮಾ ಯೋಜನೆ ನಿಮಗೆ ಹೇಗೆ ನೆರವಾಗುತ್ತವೆ ?

☞ ನಗದು ಆದಾಯದ ಮೇಲೆ ಅವಲಂಬಿತವಾಗಿರುವುದು ಆಧುನಿಕ ಅರ್ಥವ್ಯವಸ್ಥೆಯ ಪ್ರಮುಖ ಲಕ್ಷಣವಾಗಿದೆ. ಹಾಗಾಗಿ ಒಂದು ಸಣ್ಣ ಅವಧಿಯಲ್ಲಿ ನಗದು ಆದಾಯಕ್ಕೆ ಅಡಚಣೆಯಾದರೂ ಸಹ ಸಂಕಷ್ಟವೇರ್ಪಡುತ್ತದೆ. ದೀರ್ಘಾವಧಿಯ ಆದಾಯ ಕಡಿತವಾದರಂತೂ ಅದು ದೊಡ್ಡ ಆಘಾತವೇ ಆಗುತ್ತದೆ. ಕಾಯಿಲೆ, ಹೆರಿಗೆ, ಅಂಗವಿಕಲತೆ ಹಾಗೂ ವೃತ್ತಿ ಅಪಘಾತದಿಂದ ಸಾವುಂಟಾಗುವುದು ಈ ತರಹದ ಕ್ಲಿಷ್ಟ ಪರಿಸ್ಥಿತಿಗಳಲ್ಲಿ ಇ.ಎಸ್.ಐ. ಯೋಜನೆಯು ನಿಮಗೆ ವೈದ್ಯಕೀಯ ಸುರಕ್ಷೆ ಹಾಗೂ ನಿಮ್ಮ ಆದಾಯದಲ್ಲಿ ಸ್ಥಿರತೆ ಒದಗಿಸಲು ಮುಂದೆ ಬರುತ್ತದೆ ಹಾಗೂ ನಿಮ್ಮ ಆರ್ಥಿಕ ಆತಂಕವನ್ನು ಕಡಿಮೆ ಮಾಡಲು ಯತ್ನಿಸುತ್ತದೆ ಮತ್ತು ಅವಶ್ಯಕ ಘಳಿಗೆಯಲ್ಲಿ ಹಾಗೂ ಸಂಕಟದ ಸಮಯದಲ್ಲಿ ನಿಮ್ಮ ಗೆಳೆಯನಂತೆ ಸಹಾಯಕ್ಕೆ ಬರುತ್ತದೆ.

### 3. ಇದನ್ನು ಆರೋಗ್ಯ ವಿಮಾ ಯೋಜನೆ ಎಂದು ಏಕೆ ಕರೆಯಲಾಗುತ್ತದೆ ?

☞ ಇ.ಎಸ್.ಐ. ಯೋಜನೆಯು ಎರಡು ರೀತಿಯ ಪಾತ್ರ ವಹಿಸುತ್ತದೆ. ವಸ್ತು ರೂಪದಲ್ಲಿ (ವೈದ್ಯಕೀಯ ಸೇವೆ) ಸಹಾಯ ನೀಡುವುದರೊಂದಿಗೆ ಇದು ನಿಮ್ಮ ಆರೋಗ್ಯ ಹಾಗೂ ಕೆಲಸ ಮಾಡುವ ಸಾಮರ್ಥ್ಯವನ್ನು ಪುನಃ ಪಡೆಯಲು ನೆರವಾಗುತ್ತದೆ ಹಾಗೂ ಎರಡನೆಯದಾಗಿ ನಗದು ಹಿತಲಾಭವನ್ನು ಒದಗಿಸುವುದರ ಮೂಲಕ ನಿಮ್ಮ ಆದಾಯದಲ್ಲಿ ಕಡಿತ ಉಂಟಾದಾಗ ನಿಮ್ಮ ಆರ್ಥಿಕ ಕ್ಷಮತೆಗೆ ಧಕ್ಕೆ ಉಂಟಾಗದಂತೆ ನೋಡಿಕೊಳ್ಳುತ್ತದೆ. ಹೆಚ್ಚಿನ ಹಾಗೂ ಸರಳ ಮತ್ತು ಸುಲಲಿತ ಆರೋಗ್ಯ ಸುರಕ್ಷೆ ಹಾಗೂ ಆಪತ್ಕಾಲದಲ್ಲಿ ಆದಾಯದಲ್ಲಿ ಸ್ಥಿರತೆ ಒದಗಿಸುವ ಭರವಸೆ ನೀಡುತ್ತಾ ಇದು ನಿಮ್ಮನ್ನು ಉತ್ತಮ ಆರೋಗ್ಯವಂತ ಹಾಗೂ ಸುರಕ್ಷಿತ ನೌಕರರನ್ನಾಗಿಸುತ್ತದೆ. ತನ್ಮೂಲಕ ನಿಮ್ಮನ್ನು ಒಬ್ಬ ಸುಖೀ ವ್ಯಕ್ತಿಯನ್ನಾಗಿಸುತ್ತದೆ. ಈ ನೆರವು ನಿಮಗೆ ಅನುಕಂಪದ ರೂಪದಲ್ಲಿ ಬರುವುದಿಲ್ಲ, ಬದಲಾಗಿ ನೀವು ಗಳಿಸಿದಕ್ಕಾಗಿ ಲಭ್ಯವಾಗುತ್ತದೆ.

### 4. ಇ.ಎಸ್.ಐ. ಯೋಜನೆಯ ಆಡಳಿತವನ್ನು ಯಾರು ನಿರ್ವಹಿಸುತ್ತಾರೆ ?

☞ ಉದ್ಯೋಗದಾತರು, ನೌಕರರು, ಕೇಂದ್ರಸರ್ಕಾರ, ರಾಜ್ಯ ಸರ್ಕಾರ, ವೈದ್ಯ ವೃತ್ತಿನಿರತರು, ಲೋಕಸಭಾ ಸದಸ್ಯರು - ಮೊದಲಾದವರನ್ನೊಳಗೊಂಡ ಇಎಸ್ಐ ನಿಗಮವೆಂಬ ಸಂಯುಕ್ತ ಸಂಸ್ಥೆ (Corporate Body)ಯು ಈ ಯೋಜನೆಯನ್ನು ನಿರ್ವಹಿಸುತ್ತದೆ. ಮಹಾ ನಿರ್ದೇಶಕರು ಈ ಸಂಸ್ಥೆಯ ಮುಖ್ಯ ಕಾರ್ಯಕಾರಿ ಅಧಿಕಾರಿ (C.E.O.) ಆಗಿರುತ್ತಾರೆ ಹಾಗೂ ನಿಗಮದ Ex offiicio ಸದಸ್ಯರಾಗಿರುತ್ತಾರೆ. ಸ್ಟ್ಯಾಂಡಿಂಗ್ ಕಮಿಟಿ (ನಿಗಮದ ಪ್ರಾತಿನಿಧಿಕ ಸಂಸ್ಥೆ) ಹಾಗೂ ವೈದ್ಯಕೀಯ ಹಿತಲಾಭದ ಆಡಳಿತಾತ್ಮಕ ವಿಷಯದಲ್ಲಿ ನಿಗಮಕ್ಕೆ ಸಲಹೆ ಸೂಚನೆ ಕೊಡುವ ವಿಶೇಷಜ್ಞರ ಸಮಿತಿಯಾದ ಮೆಡಿಕಲ್ ಬೆನಿಫಿಟ್ ಕೌನ್ಸಿಲ್ - ರಾಷ್ಟ್ರೀಯ ಮಟ್ಟದ ಇನ್ನಿತರೆ ಸಂಸ್ಥೆಗಳು, ಪ್ರಾದೇಶಿಕ ಹಾಗೂ ಸ್ಥಳೀಯ ಸ್ಥರಗಳಲ್ಲಿ ರೀಜನಲ್ ಬೋರ್ಡ್ ಹಾಗೂ ಸ್ಥಳೀಯ ಸಮಿತಿಗಳನ್ನು ರಚಿಸಲಾಗಿದೆ. ಹೀಗೆ ಎಲ್ಲಾ ಸ್ತರಗಳಲ್ಲಿಯೂ ಆಸಕ್ತರ ಗುಂಪುಗಳನ್ನು ಸಂಘಟಿಸಲಾಗಿದೆ.

ಇ.ಎಸ್.ಐ. ವಿಮಾದಾರರ ಹಿತರಕ್ಷಕನಾಗಿದೆ. ಅದು ತನ್ನ ಕರ್ತವ್ಯ ಮತ್ತು ಬಾಧ್ಯತೆಗಳನ್ನು ದೇಶದೆಲ್ಲೆಡೆ ಹರಡಿರುವ ಅನೇಕ ಪ್ರಾದೇಶಿಕ ಕಛೇರಿಗಳು ಮತ್ತು ಶಾಖಾ ಕಛೇರಿಗಳು, ಆಸ್ಪತ್ರೆಗಳು ಹಾಗೂ ಚಿಕಿತ್ಸಾಲಯಗಳ ಮೂಲಕ ನಿರ್ವಹಿಸುತ್ತದೆ.

### 5. ಯೋಜನೆಯು ಯಾರನ್ನು ರಕ್ಷಿಸುತ್ತದೆ ?

☞ ಈ ಯೋಜನೆಯು ಇಎಸ್ಐ ಕಾಯ್ದೆ ಅನ್ವಯವಾಗಿರುವ ಯಾವುದೇ ಕಾರ್ಖಾನೆ, ಘಟಕ ಅಥವಾ ಸಂಸ್ಥೆಗಳಲ್ಲಿ ತಿಂಗಳಿಗೆ ರೂ.10,000/- ರೊಳಗೆ ಸಂಬಳ ಪಡೆಯುವ ಎಲ್ಲ ನೌಕರರನ್ನು ರಕ್ಷಿಸುತ್ತದೆ. ಸಂಬಳಕ್ಕೆ ನೇಮಕ ಮಾಡಿಕೊಂಡಿರುವ ಕಾರ್ಖಾನೆಯ ಅಥವಾ ಸಂಸ್ಥೆಯ ಅಥವಾ ಅದರ ಅಂಗ ಸಂಸ್ಥೆಯ ಆಡಳಿತಾತ್ಮಕ ಕಾರ್ಯನಿರ್ವಹಿಸುವ, ವಿಭಾಗ ಅಥವಾ ಶಾಖಾ ಕಛೇರಿಯಲ್ಲಿ

ಕಾರ್ಯನಿರ್ವಹಿಸುವ ಅಥವಾ ಕಾರ್ಖಾನೆಯ ಮತ್ತು ಸಂಸ್ಥೆಯ ಉತ್ಪಾದನೆಯ ವಿತರಣೆ ಅಥವಾ ಮಾರಾಟದಲ್ಲಿ ತೊಡಗಿರುವ ಎಲ್ಲಾ ವ್ಯಕ್ತಿಗಳಿಗೂ ಈ ಯೋಜನೆ ಅನ್ವಯಿಸುತ್ತದೆ. ಗಣಿಗಳು, ರೈಲ್ವೆ ರನ್ನಿಂಗ್ ಶೆಡ್‌ಗಳು, ಭೂಸೇನೆ, ವಾಯುಸೇನೆ, ನೌಕಾದಳದ ಕಾರ್ಯಾಗಾರಗಳು ಹಾಗೂ ವಿಶೇಷವಾಗಿ ಗುರುತಿಸಲಾದ ಋತುವಿನನ್ವಯ ಕಾರ್ಯನಿರ್ವಹಿಸುವ ಕಾರ್ಖಾನೆಗಳನ್ನು ಈ ಯೋಜನೆಯಿಂದ ಹೊರತುಪಡಿಸಲಾಗಿದೆ. ಈ ಯೋಜನೆಯು ವಿಮಾದಾರರ ಆಶ್ರಿತರಿಗೂ ಕೂಡ ಸಂಪೂರ್ಣ ವೈದ್ಯಕೀಯ ಸೇವೆಯನ್ನು ನೀಡುತ್ತದೆ. ವೃತ್ತಿ ಸಂಬಂಧದ ಅಪಘಾತದಿಂದಾಗಿ ವಿಮಾದಾರ ಮೃತ್ಯುವಶನಾದ ಸಂದರ್ಭದಲ್ಲಿ ಅವನ ಆಶ್ರಿತರು ನಗದು ಹಿತಲಾಭಕ್ಕೆ ಅರ್ಹರಾಗುತ್ತಾರೆ.

## 6. ಇ.ಎಸ್.ಐ. ನಿಗಮಕ್ಕೆ ನಿಧಿ (Fund) ಎಲ್ಲಿಂದ ಬರುತ್ತದೆ ?

☞ ತಿಂಗಳ ಸಂಬಳದ ನಿಗದಿತ ಶೇಕಡಾವಾರು ಮೊತ್ತವನ್ನು ಮಾಲೀಕ ಹಾಗೂ ನೌಕರರಿಂದ ವಂತಿಗೆ ರೂಪದಲ್ಲಿ ಸಂಗ್ರಹಿಸುವುದರ ಮೂಲಕ ಮೂಲತಃ ಇಎಸ್‌ಐ ನಿಗಮವು ನಿಧಿಯನ್ನು ಸಂಗ್ರಹಿಸುತ್ತದೆ.

**ಭಾರತದ ಇಎಸ್‌ಐ ಯೋಜನೆ**

**ಪ್ರತಿ ವಂತಿಗೆದಾರನೂ ಒಬ್ಬ ಉಪಕಾರಿ ಹಾಗೂ ಉಪಕೃತನಾಗುವ ಒಂದು ವಿವಿಧ ಆಯಾಮಗಳ ಸಾಮಾಜಿಕ ಸುರಕ್ಷಾ ಯೋಜನೆ**

## ನೋಂದಣಿ ವಂತಿಗೆ ಹಾಗೂ ಸಂಬಂಧಿತ ಸೌಲಭ್ಯಗಳು

### 7. ಈ ಯೋಜನೆಯಡಿ ನೌಕರನನ್ನು ಹೇಗೆ ನೋಂದಣಿ ಮಾಡಲಾಗುತ್ತದೆ ?

☞ ಇಎಸ್ಐ ಕಾಯ್ದೆ ಅನ್ವಯವಾಗುವ ಯಾವುದೇ ಕಾರ್ಖಾನೆ ಅಥವಾ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದೊಡನೆ ಪ್ರತಿ ನೌಕರನೂ ಒಂದು ಘೋಷಣಾ ಪತ್ರವನ್ನು ತುಂಬ ಬೇಕಾಗಿರುತ್ತದೆ. ನಂತರ ಆ ನೌಕರನಿಗೆ/ಳಿಗೆ ಈ ಯೋಜನೆಯ ಉದ್ದೇಶ್ಯಗಳಿಗಾಗಿ ವಿಶೇಷವಾಗಿ ಗುರುತಿಸುವ ಸಲುವಾಗಿ ಒಂದು ನೋಂದಣಿ ಸಂಖ್ಯೆಯನ್ನು ನೀಡಲಾಗುತ್ತದೆ. ಒಬ್ಬ ವ್ಯಕ್ತಿಯು ವಿಮಾಕೃತ ಉದ್ಯೋಗವನ್ನು ಸೇರಿದಾಗ ಒಮ್ಮೆ - ಒಂದು ಬಾರಿ ಮಾತ್ರ ನೋಂದಾಯಿಸಲ್ಪಡುತ್ತಾನೆ.

### 8. ಗುರುತಿನ ಚೀಟಿ ಎಂದರೇನು ?

☞ ನೋಂದಣಿಯಾದ ನಂತರ ಪ್ರತಿ ವಿಮಾದಾರ ವ್ಯಕ್ತಿಗೆ ಸಾಮಾನ್ಯವಾಗಿ ಮೂರು ತಿಂಗಳವರೆಗೆ ಊರ್ಜಿತವಾಗಿರುವ ಅಗತ್ಯ ಬಿದ್ದರೆ ಮತ್ತೆ ಮೂರು ತಿಂಗಳವರೆಗೆ ನವೀಕರಿಸಬಹುದಾದ ತಾತ್ಕಾಲಿಕ ಗುರುತಿನ ಚೀಟಿಯನ್ನು ನೀಡಲಾಗುತ್ತದೆ. ಈ ಅವಧಿಯೊಳಗೆ, ವಿಮಾದಾರನಿಗೆ ಈ ತಾತ್ಕಾಲಿಕ ಗುರುತಿನ ಚೀಟಿಯ ಬದಲು ಖಾಯಂ ಆದ ಕೌಟುಂಬಿಕ ಚಿತ್ರವಿರುವ ಗುರುತಿನ ಚೀಟಿಯನ್ನು ನೀಡಲಾಗುತ್ತದೆ. ಈ ಗುರುತಿನ ಚೀಟಿಯು ವಿಮಾದಾರನನ್ನು ಗುರುತು ಹಿಡಿಯುವ ಸಾಧನವಾಗಿ ಕೆಲಸ ಮಾಡುತ್ತದೆ ಹಾಗೂ ಅದನ್ನು ಚಿಕಿತ್ಸಾಲಯದಲ್ಲಿ ವೈದ್ಯಕೀಯ ಸೇವೆ ಪಡೆಯುವಾಗ ಹಾಗೂ ನಿಗಮದ ಶಾಖಾ ಕಛೇರಿಯಲ್ಲಿ ನಗದು ಹಿತಲಾಭ ಪಡೆಯುವಾಗ ತೋರಿಸಬೇಕಾಗುತ್ತದೆ. ಎರಡನೆ ಬಾರಿ ನೋಂದಣಿಯಾಗುವುದನ್ನು ತಪ್ಪಿಸಲು, ನೌಕರಿಯಲ್ಲಿ ಬದಲಾವಣೆಯಾದಾಗ, ಈ ಯೋಜನೆ ಯಡಿ ನೋಂದಣಿಯಾದ ಗುರುತಿಗಾಗಿ ಈ ಗುರುತಿನ ಚೀಟಿಯನ್ನು ಹೊಸ ಮಾಲೀಕರೆದುರು ತೋರಿಸಬೇಕಾಗುತ್ತದೆ. ಈ ಗುರುತಿನ ಚೀಟಿಯು ವಿಮಾಕೃತ ವ್ಯಕ್ತಿಯ ಹೆಬ್ಬೆಟ್ಟಿನ ಮುದ್ರೆ / ಸಹಿಯನ್ನು ಹೊಂದಿರುತ್ತದೆ.

ವೈದ್ಯಕೀಯ ಹಿತಲಾಭವು ವಿಮಾದಾರರ ಕುಟುಂಬದವರಿಗೂ ಲಭ್ಯವಿರುವುದರಿಂದ, ವೈದ್ಯಕೀಯ ಹಿತಲಾಭ ಪಡೆಯಲು ಅರ್ಹರಾಗಿರುವ ಕುಟುಂಬದ ಸದಸ್ಯರ ವಿವರಗಳನ್ನು ಗುರುತಿನ ಚೀಟಿಯಲ್ಲಿ ಕೊಡಲಾಗಿರುತ್ತದೆ ಹಾಗೂ ಪೋಸ್ಟ್ ಕಾರ್ಡ್ ಅಳತೆಯ ಕುಟುಂಬದ ಫೋಟೋವನ್ನು ಇದಕ್ಕೆ ಲಗತ್ತಿಸಲಾಗಿರುತ್ತದೆ.

ನೀವು ಈ ಗುರುತಿನ ಚೀಟಿಯನ್ನು ಕಳೆದುಕೊಂಡರೆ ನಿಗದಿತ ಮೊತ್ತವನ್ನು ಪಾವತಿ ಮಾಡಿದರೆ ಇದರ ನಕಲನ್ನು ನೀಡಲಾಗುತ್ತದೆ.

### 9. ವಂತಿಗೆಯ ದರಗಳೇನು ?

☞ ಒಬ್ಬ ನೌಕರನ ವಿಮೆಗಾಗಿ ಪಾವತಿಸಬೇಕಾದ ವಂತಿಗೆಯು ಮಾಲೀಕರ ವಂತಿಗೆ ಹಾಗೂ ನೌಕರನ ವಂತಿಗೆಯನ್ನೊಳಗೊಂಡಿರುತ್ತದೆ.

ಈ ಯೋಜನೆಯ ವ್ಯಾಪ್ತಿಗೆ ಬರುವ ಒಬ್ಬ ನೌಕರನು ತನ್ನ ಸಂಬಳದ ಶೇಕಡಾ 1.75ನ್ನು ವಂತಿಗೆಯಾಗಿ ನೀಡಬೇಕಾಗುತ್ತದೆ ಹಾಗೂ ಒಬ್ಬ ಮಾಲೀಕನು ಕೊಡಲಾಗುವ ಸಂಬಳದ 4.75%ರಷ್ಟನ್ನು ವಂತಿಗೆಯಾಗಿ ನೀಡಬೇಕಾಗುತ್ತದೆ. ಹೀಗೆ ಒಬ್ಬ ನೌಕರನ ವಿಮೆಗಾಗಿ ಕೊಡಲಾಗುವ ಒಟ್ಟು ವಂತಿಗೆಯು ಸಂಬಳದ 6.5% ರಷ್ಟಾಗುತ್ತದೆ.

### 10. ವಂತಿಗೆ ಪಾವತಿಸುವುದರಿಂದ ಯಾರಿಗೆ ವಿನಾಯ್ತಿ ಇದೆ ?

☞ ದಿನ ಒಂದಕ್ಕೆ ರೂ. 50/- ಮತ್ತು ರೂ. 50/- ಕ್ಕಿಂತ ಕಡಿಮೆ ವೇತನ ಪಡೆಯುವ ನೌಕರನು ವಂತಿಗೆ ಪಾವತಿಸುವುದರಿಂದ ವಿನಾಯಿತಿ ಪಡೆಯುತ್ತಾನೆ. ಆದರೆ ಆ ನೌಕರನ ಸಂಬಳಕ್ಕನುಗುಣವಾಗಿ ಮಾಲೀಕರ ಪಾಲಿನ ವಂತಿಗೆಯನ್ನು ಮಾಲೀಕರು ಪಾವತಿಸಬೇಕಾಗುತ್ತದೆ.

### 11. ವಂತಿಗೆಯನ್ನು ಹೇಗೆ ಸಂಗ್ರಹಿಸಲಾಗುತ್ತದೆ ?

☞ ವಂತಿಗೆಯು ಮಾಲೀಕರಿಂದ ನಗದು ಅಥವಾ ಚೆಕ್ಕಿನ ರೂಪದಲ್ಲಿ ಕೆಲವು ರಾಷ್ಟ್ರೀಕೃತ ಬ್ಯಾಂಕುಗಳ ನಿಯೋಜಿತ ಶಾಖೆಗಳಲ್ಲಿ ಜಮ ಮಾಡಲ್ಪಡುತ್ತದೆ. ವಂತಿಗೆಯನ್ನು ನೀಡಬೇಕಾದ ಅವಧಿಯ ಸಂಬಳದಿಂದ ನೌಕರನ ಭಾಗದ ವಂತಿಗೆಯನ್ನು ವಸೂಲು ಮಾಡುವ ಹಕ್ಕು ಮಾಲೀಕರಿಗೆ ಕೊಡಲ್ಪಟ್ಟಿದೆ ಹಾಗೂ ಎಲ್ಲಾ ವಂತಿಗೆ (ನೌಕರ ಹಾಗೂ ಮಾಲೀಕರ ಭಾಗದ ವಂತಿಗೆ)ಯನ್ನು ಪಾವತಿಸುವ ಜವಾಬ್ದಾರಿ ಮಾಲೀಕರದ್ದಾಗಿರುತ್ತದೆ.

### 12. 'ವಂತಿಗೆ ಅವಧಿ' ಹಾಗೂ 'ಹಿತಲಾಭದ ಅವಧಿ' ಎಂದರೇನು ?

☞ ಇಎಸ್‌ಐ ಕಾಯ್ದೆಯನ್ವಯ ವಿಮೆಗೆ ಒಳಗಾಗಿರುವ ಕಾರ್ಮಿಕರು ಈ ಯೋಜನೆಗೆ ಮಾಸಿಕ ಆಧಾರದಲ್ಲಿ ವಂತಿಗೆಯನ್ನು ನೀಡಬೇಕಾಗುತ್ತದೆ. 'ವಂತಿಗೆಯ ಅವಧಿ' ಎಂದರೆ ಒಂದನೇ ಏಪ್ರಿಲ್‌ನಿಂದ ಮೂವತ್ತನೇ ಸೆಪ್ಟೆಂಬರ್ ಹಾಗೂ ಒಂದನೇ ಅಕ್ಟೋಬರ್‌ನಿಂದ ಮೂವತ್ತೊಂದನೇ ಮಾರ್ಚ್‌ವರೆಗಿನ ಆರು ತಿಂಗಳುಗಳ ಅವಧಿಯಾಗಿರುತ್ತದೆ. ಹೀಗೆ ಒಂದು ಹಣಕಾಸು ವರ್ಷದಲ್ಲಿ ಆರು ತಿಂಗಳುಗಳ ಎರಡು ವಂತಿಗೆಯ ಅವಧಿಗಳಿರುತ್ತವೆ.

ಸಾಮಾನ್ಯವಾಗಿ ಈ ಯೋಜನೆಯಡಿ ನೀಡಲಾಗುವ ನಗದು ಹಿತಲಾಭಗಳು ಪಾವತಿಸಿದ ವಂತಿಗೆಯ ಮೇಲೆ ನಿರ್ಧರಿತವಾಗಿರುತ್ತವೆ. 'ಹಿತಲಾಭದ ಅವಧಿ'ಯು ವಂತಿಗೆಯ ಅವಧಿ ಮುಗಿದ ಮೂರು ತಿಂಗಳ ನಂತರ ಪ್ರಾರಂಭವಾಗುತ್ತದೆ. ಈ ಎರಡೂ ಅವಧಿಗಳು ಕೆಳಗಿನಂತಿವೆ.

| ವಂತಿಗೆಯ ಅವಧಿ | ತತ್ಸಂಬಂಧ ಹಿತಲಾಭದ ಅವಧಿ |
|---|---|
| ಏಪ್ರಿಲ್ 1 ರಿಂದ 30 ಸೆಪ್ಟೆಂಬರ್ | ಜನವರಿ 1 ರಿಂದ 30 ಜೂನ್ |
| ಅಕ್ಟೋಬರ್ 1 ರಿಂದ 31 ಮಾರ್ಚ್ | ಜುಲೈ 1 ರಿಂದ 31 ಡಿಸೆಂಬರ್ |

## 13. ಶಾಖಾ ಕಾರ್ಯಾಲಯ ಎಂದರೇನು ?

ಈ ಯೋಜನೆಯು ಕಾರ್ಯಗತವಾಗಿರುವ ಎಲ್ಲ ಕ್ಷೇತ್ರಗಳಲ್ಲಿ ಕಾಯಿಲೆ, ಮಾತೃತ್ವ, ಅಂಗವಿಕಲತೆ ಹಾಗೂ ಆಶ್ರಿತರ ಹಿತಲಾಭದ ಕೋರಿಕೆಗಳನ್ನು ಸ್ವೀಕರಿಸಲು ಹಾಗೂ ತತ್ಸಂಬಂಧ ಹಿತಲಾಭಗಳನ್ನು ವಿತರಿಸಲು ನಿಗಮವು ಸಾಖಾ ಕಾರ್ಯಾಲಯಗಳ ಸಂಪರ್ಕ ಜಾಲವನ್ನು ನಿರ್ಮಿಸಿದೆ. ಶಾಖಾ ಕಾರ್ಯಾಲಯಗಳು ಈ ಯೋಜನೆಗೆ ಸಂಬಂಧಪಟ್ಟಂತೆ ಪ್ರಶ್ನೆ / ಸಂದೇಹಗಳನ್ನು ಪರಿಹರಿಸುತ್ತದೆ ಹಾಗೂ ಕೋರಿಕೆ ಫಾರ್ಮುಗಳನ್ನು ತುಂಬಲು ಹಾಗೂ ಕೋರಿಕೆ ಇತ್ಯರ್ಥ ಮಾಡಲು ಅವಶ್ಯಕವಾದ ಇತರ ಕಾರ್ಯಗಳನ್ನು ನಿರ್ವಹಿಸಲು ನೆರವಾಗುತ್ತದೆ. ಈ ಕಛೇರಿಗಳು ಸಂಬಂಧಿತ ಪ್ರದೇಶದ ಮಾಲೀಕ ರೊಂದಿಗೆ ಸಂಪರ್ಕ ಇಟ್ಟುಕೊಂಡಿರುತ್ತವೆ. ಈ ಶಾಖಾ ಕಛೇರಿಗಳು ಒಬ್ಬ ವ್ಯವಸ್ಥಾಪಕರಿಂದ ನಿರ್ವಹಿಸಲ್ಪಡು ತ್ತವೆ ಹಾಗೂ ಪ್ರಾದೇಶಿಕ ಕಾರ್ಯಾಲಯದ ನಿಯಂತ್ರಣ ಹಾಗೂ ನಿರ್ದೇಶನದಡಿ ಕೆಲಸ ಮಾಡುತ್ತವೆ.

**ಬೊಗಸೆಯಷ್ಟು ವಂತಿಗೆಗೆ**

**ಬುಟ್ಟಿ ತುಂಬಾ ಹಿತಲಾಭಗಳು**

-ಇಎಸ್ಐ

# ಸಾಮಾಜಿಕ ಸುರಕ್ಷತೆಯ ಹಿತಲಾಭಗಳು

## ಕಾಯಿಲೆ ಹಿತಲಾಭ

### 14. ಕಾಯಿಲೆ ಹಿತಲಾಭ ಎಂದರೇನು ?

☞ 'ಕಾಯಿಲೆ' ಎಂದರೆ ವೈದ್ಯಕೀಯ ಚಿಕಿತ್ಸೆ ಅವಶ್ಯಕವಾಗಿರುವ ಹಾಗೂ ವೈದ್ಯಕೀಯ ಕಾರಣದಿಂದಾಗಿ ಕೆಲಸದಿಂದ ರಜೆ ಪಡೆಯುವಂತಹ ಅನಾರೋಗ್ಯದ ಸ್ಥಿತಿ. ಅಂತಹ ಪರಿಸ್ಥಿತಿಯಲ್ಲಿ ನಿಗಮದಿಂದ ನೀಡಲಾಗುವ ಆರ್ಥಿಕ ಸಹಾಯವನ್ನು 'ಕಾಯಿಲೆ ಹಿತಲಾಭ' ಎನ್ನುತ್ತಾರೆ.

### 15. ವಂತಿಗೆಯ ನಿಯಮಗಳೇನು ?

☞ ಯಾವುದೇ ಹಿತಲಾಭದ ಅವಧಿಯಲ್ಲಿ ಕಾಯಿಲೆ ಹಿತಲಾಭ ಪಡೆಯಲು ವಿಮಾದಾರನು ಸಂಬಂಧಿತ ವಂತಿಗೆ ಅವಧಿಯಲ್ಲಿ 78 ದಿನಗಳಿಗೆ ಕಡಿಮೆಯಿರದಂತೆ ವಂತಿಗೆ ಪಾವತಿಸಿರಬೇಕಾಗುತ್ತದೆ.

### 16. 'ನಿಗದಿತ ಹಿತಲಾಭದ ದರ' ಎಷ್ಟು?

☞ ಯಾವುದೇ ಹಿತಲಾಭದ ಅವಧಿಯಲ್ಲಿ ಕೊಡಲಾಗುವ ಕಾಯಿಲೆ ಹಿತಲಾಭದ ದರವನ್ನು 'ನಿಗದಿತ ಹಿತಲಾಭದ ದರ' ಎನ್ನುತ್ತಾರೆ. ಈ ದರವು ವಿಮಾದಾರನ ಸಂಬಂಧಿತ ವಂತಿಗೆ ಅವಧಿಯ ದೈನಂದಿನ ಸಂಬಳ / ಮಜೂರಿಯ ಮೇಲೆ ಆಧಾರಿತವಾಗಿರುತ್ತದೆ ಹಾಗೂ ದೈನಿಕ ವೇತನದ ಸುಮಾರು ಅರ್ಧದಷ್ಟಾಗಿರುತ್ತದೆ. ಈ ಹಿತಲಾಭವನ್ನು ಭಾನುವಾರಗಳಿಗೂ ನೀಡಲಾಗುತ್ತದೆ. ನಿಗದಿತ ಹಿತಲಾಭದ ದರವನ್ನು ವಂತಿಗೆ ಅವಧಿಯ ದೈನಿಕ ವೇತನದ ಆಧಾರದ ಮೇಲೆ 32 ಹಂತಗಳಲ್ಲಿ ನಿಗದಿಗೊಳಿಸಲಾಗಿದೆ. ಇದನ್ನು ಅನುಬಂಧ-'ಅ'ದಲ್ಲಿ ಕೊಡಲಾಗಿದೆ.

### 17. ಕಾಯಿಲೆ ಹಿತಲಾಭದ ಅವಧಿ ಏನು ?

☞ ಕಾಯಿಲೆ ಹಿತಲಾಭವನ್ನು ಅನುಕ್ರಮವಾಗಿ ಬರುವ ಎರಡು ಹಿತಲಾಭದ ಅವಧಿಗಳಲ್ಲಿ ಗರಿಷ್ಠ 91 ದಿನಗಳವರೆಗೆ ನೀಡಲಾಗುತ್ತದೆ. ಕಾಯಿಲೆಯ ಮೊದಲ ಎರಡು ದಿನಗಳನ್ನು ನಿರೀಕ್ಷೆಯ ದಿನಗಳೆಂದು ಪರಿಗಣಿಸಿ ಕಾಯಿಲೆ ಹಿತಲಾಭವನ್ನು ನೀಡಲಾಗುವುದಿಲ್ಲ. ಆದರೆ ಹಿಂದಿ ನಕಾಯಿಲೆ ಹಿತಲಾಭ ಪಡೆದ ಅವಧಿಯ 15 ದಿನಗಳೊಳಗಾಗಿ ಮತ್ತೊಮ್ಮೆ ಕಾಯಿಲೆ ಎಂದು ಪ್ರಮಾಣೀಕರಿಸಲ್ಪಟ್ಟಲ್ಲಿ ಪುನಃ ನಿರೀಕ್ಷೆಯ ದಿನಗಳನ್ನು ಕಡಿತಗೊಳಿಸಲಾಗುವುದಿಲ್ಲ ಹಾಗೂ ಆ ದಿನಗಳಿಗೂ ಕಾಯಿಲೆ ಹಿತಲಾಭವನ್ನು ನೀಡಲಾಗುತ್ತದೆ.

## ವಿಸ್ತರಿತ ಕಾಯಿಲೆ ಹಿತಲಾಭ

**18. ವಿಸ್ತರಿತ ಕಾಯಿಲೆ ಹಿತಲಾಭ ಎಂದರೇನು ?**

ಈ ಕೆಳಗೆ ನಮೂದಿಸಿರುವ 34 ಕಾಯಿಲೆಗಳಿಂದ ದೀರ್ಘಾವಧಿಯವರೆಗೆ ನರಳುತ್ತಿರುವ ವಿಮಾದಾರನಿಗೆ ನೀಡಲಾಗುವ ನಗದು ಹಿತಲಾಭವನ್ನು ವಿಸ್ತರಿತ ಕಾಯಿಲೆ ಹಿತಲಾಭ ಎನ್ನುತ್ತಾರೆ.

| | |
|---|---|
| 1. ಕ್ಷಯ ರೋಗ | Tuberculosis |
| 2. ಕುಷ್ಠರೋಗ | Leprosy |
| 3. ಕ್ರಾನಿಕ್ ಎಂಪಿಮಾ | Chronic Empyema |
| 4. ಬ್ರಾಂಕಿಯಾಕ್ಟಿಸಿಸ್ | Bronckiactesis |
| 5. ಇಂಟರ್ ಸ್ಟಿಸ್ಟಿಯಲ್ ಲಂಗ್ ಡಿಸೀಸ್ | Intersistial Lung disease |
| 6. ಎಚ್.ಐ.ವಿ/ಏಯ್ಡ್ಸ್ | HIV / AIDS |
| 7. ಮಾಲಿಗ್ನಂಟ್ ಡಿಸೀಜಸ್ | Malignant disease |
| 8. ಪ್ರೋಲೈಫರೇಟಿವ್ ರೆಟಿನೋಪಥಿ ಸಹಿತ ಡಯಾಬಿಟಿಸ್ ಮೆಲಿಟಸ್, ಡಯಾಬಿಟಿಕ್ ಫುಟ್/ನೆಫ್ರೋಪತಿ | Diabetes Mellitus with Proliferative retinopathy / diabetic foot / Nephrophathy |
| 9. ಮೋನೋಪ್ಲೀಜಿಯಾ | Monoplegia |
| 10. ಹೆಮಿಪ್ಲೀಜಿಯಾ | Hemiplegia |
| 11. ಪಾರಾಪ್ಲೀಜಿಯಾ | Paraplegia |
| 12. ಹೆಮಿಪೆರಾಸಿಸ್ | Hemiparesics |
| 13. ಇಂಟ್ರಾ ಕ್ರೆನಿಯಲ್ ಸ್ಪೇಸ್ ಆಕ್ಯೂಪಾಯಿಂಗ್ ಲೆಜನ್ | Intracranial Space Occupying lesian |
| 14. ಸ್ಪೈನಲ್ ಕಾರ್ಡ್ ಕಾಂಪ್ರೆಷನ್ | Spinal Cord Compression |
| 15. ಪಾರ್ಕಿಸನ್ಸ್ ಡಿಸೀಜಸ್ | Parkinsans disease |
| 16. ಮಯಾಸ್ಥಿನಿಯಾ ಗ್ರಾವಿಸ್/ನ್ಯೂರೋ ಮಸ್ಕ್ಯುಲರ್ ಡೈಸ್ಟ್ರೋಫೀಸ್ | Myaesthenia Gravis/ Neuro Muscular Dystrophies |
| 17. ಇಮ್ಮೆಚ್ಯುರ್ ಕ್ಯಾಟಾರ್‍ಯಾಕ್ಟ್ ವಿತ್ ವಿಜನ್ 6/60 ಅಥವಾ ಕಡಿಮೆ | Immature Cataract with vision 6/60 or less |
| 18. ಡಿಟ್ಯಾಚ್‌ಮೆಂಟ್ ಆಫ್ ರೆಟಿನಾ | Detachment of Retina |
| 19. ಗ್ಲೂಕೋಮಾ – ಕಣ್ಣಿನ ಒತ್ತಡ | Glaucoma |
| 20. ಕೊರೋನರಿ ಆರ್ಟರಿ ಡಿಸೀಜ್ | Coronery Artery Disease |
| ಎ) ಅನ್‌ಸ್ಟೇಬಲ್ ಆಂಜಿನ | a) Unstable Angina |
| ಬಿ) ಮಯೋಕಾರ್ಡಿಯಲ್ ಇನ್‌ಫಾರ್ಕ್ಷನ್ ಎಜೆಕ್ಷನ್ 45% ಗಿಂತ ಕಡಿಮೆ | b) Myocardial Infarction with ejection less than 45% |

| | |
|---|---|
| 21. ಕಾಂಜೆಸ್ಟಿವ್ ಹಾರ್ಟ್ ಫೆಲ್ಯೂವರ್ ಎಡ/ಬಲ | Conjestive Heart failure Left/Right |
| 22. ಕಾರ್ಡಿಯಕ್ ವಾಲ್ವ್ಯುಲರ್ ಡಿಸೀಸೆಸ್ ವಿತ್ ಫೆಲ್ಯೂವರ್/ಕಾಂಪ್ಲಿಕೇಶನ್ಸ್ | Cardiac valvular Diseases with failure/complications |
| 23. ಕಾರ್ಡಿಮಯೋಪಥಿಸ್ | Cardimyopathies |
| 24. ಹಾರ್ಟ್ ಡಿಸೀಸೆಸ್ ವಿತ್ ಸರ್ಜಿಕಲ್ ಇಂಟರ್‌ವೆನ್ಷನ್ ಅಲಾಂಗ್ ವಿತ್ ಕಾಂಪ್ಲಿಕೇಶನ್ಸ್ | Heart Disease with Surgical intervention alongwith complications. |
| 25. ಕ್ರಾನಿಕ್ ಅಬ್‌ಸ್ಟ್ರಕ್ಟಿವ್ ಲಂಗ್ ಡಿಸೀಸ್ (ಸಿ.ಓ.ಪಿ.ಡಿ.) ವಿತ್ ಕಾಂಜೆಸ್ಟಿವ್ ಹಾರ್ಟ್ ಫೆಲ್ಯೂರ್ (ಕೋರ್ ಪಲ್ಮೋನೇಲ್) | Chronic obstructive lung disease (C.O.P.D.) with congestive heart failure (Cor pulmonale) |
| 26. ಸಿರ್ಹೋಸಿಸ್ ಆಫ್ ಲೀವರ್ ವಿತ್ ಆಸಿಟೀಸ್ / ಕ್ರಾನಿಕ್ ಆಕ್ಟಿವ್ ಹೆಪಿಟೆಟಿಸ್ | Cirrhosis of liver with ascities/ chronic active hepatitis |
| 27. ಡಿಸ್‌ಲೋಕೇಶನ್ ಆಫ್ ವರ್ಟೆಬ್ರಾ / ಪ್ರೋಲಾಪ್ಸ್ ಆಫ್ ಇಂಟರ್ ವರ್ಟಿಬ್ರಲ್ ಡಿಸ್ಕ್ | Dislocation of Vertebre/ Prolapse of Inter Vertebrel disc |
| 28. ನಾನ್ ಯೂನಿಯನ್ ಅಥವಾ ಡಿಲೇಡ್ ಯೂನಿಯನ್ ಆಫ್ ಫ್ರಾಕ್ಚರ್ | Non union or delayed union of fracture |
| 29. ಪೋಸ್ಟ್ ಟ್ರುಮ್ಯಾಟಿಕ್ ಸರ್ಜಿಕಲ್ ಆಂಪ್ಯೂಟೇಶನ್ ಆಫ್ ಲೋವರ್ ಎಕ್ಸ್ಟ್ರಿಮಿಟಿ. | Post Traumatic Surgical Amputation of lower extremity |
| 30. ಕಾಂಪೌಂಡ್ ಫ್ರಾಕ್ಚರ್ ವಿತ್ ಕ್ರಾನಿಕ್ ಆಸ್ಟೆಮೈಲಿಟೀಸ್ | Compound fracture with chronic astemyelitis |
| 31. ಸೈಕೋಸಿಸ್ – ಕೆಳಗಿನ ಉಪವರ್ಗಗಳು | Psychosis the following sub groups |
| ಎ) ಸ್ಕಿಜೋಫ್ರೇನಿಯಾ | a) Schizophrenia |
| ಬಿ) ಎಂಡೋಜೇನಸ್ ಡಿಪ್ರೆಶನ್ | b) Endogenous depression |
| ಸಿ) ಮ್ಯಾನಿಕ್ ಡಿಪ್ರೆಶಿವ್ ಸೈಕೋಸಿಸ್ (ಎಂ.ಡಿ.ಪಿ.) | c) Manic Depressive Psychosis (MDP) |
| ಡಿ) ಡಿಮೆನ್ಷಿಯಾ | d) Dementia |
| 32. ಶೇಕಡ 20ಕ್ಕಿಂತಲೂ ಹೆಚ್ಚು ಸುಟ್ಟ ಗಾಯದ ನಂಜು / ಕಾಂಪ್ಲಿಕೇಶನ್ | More than 20% burns with ingection/complication |
| 33. ಕ್ರಾನಿಕ್ ರೀನಲ್ ಫೆಲ್ಯೂರ್ | Chronic renal failure |
| 34. ರೇನಾಲ್ಡ್ಸ್ ಡಿಸೀಸ್ / ಬರ್ಜರ್ಸ್ ಡಿಸೀಸ್. | Reynald's disease/Burgers disease |

ಮೇಲೆ ತಿಳಿಸಿದ ಕಾಯಿಲೆಗಳಲ್ಲದೆ ಸೂಚಿತ ಆಡಳಿತ / ಪ್ರಾಧಿಕಾರದ ಮಂಜೂರಾತಿಯ ಮೇರೆಗೆ ವಿಶೇಷ ಸಂದರ್ಭಗಳಲ್ಲಿ ಅಥವಾ ಅಪರೂಪದ ಕಾಯಿಲೆಗಳಿಂದ ನರಳುವವರಿಗೆ ಸಹ ವಿಸ್ತರಿಸಿದ ಕಾಯಿಲೆ ಹಿತಲಾಭವನ್ನು ನೀಡಲಾಗುವುದು.

**19. ವಂತಿಗೆ ನಿಯಮಗಳೇನು ?**

☞ ವಿಮಾದಾರನು ಸತತವಾಗಿ 2 ವರ್ಷಗಳವರೆಗೆ ಉದ್ಯೋಗದಲ್ಲಿರಬೇಕು ಹಾಗೂ ಹಿಂದಿನ ನಿರಂತರ ನಾಲ್ಕು ವಂತಿಗೆ ಅವಧಿಯಲ್ಲಿ 156 ದಿನಗಳೊಳಗೆ ಕಡಿಮೆ ಇಲ್ಲದಂತೆ ವಂತಿಗೆ ನೀಡಿರಬೇಕು. ಆದರೆ ಈ ನಿಯಮವು ಔಷಧಿ/ಚುಚ್ಚುಮದ್ದಿನ ನಿರ್ವಹಣೆಯಿಂದಾಗಿ ಉಂಟಾದ ಅಂಗವಿಕಲತೆ / ಕಾಯಿಲೆಗೆ ಅನ್ವಯಿಸುವುದಿಲ್ಲ.

**20. ಈ ಹಿತಲಾಭದ ದರ ಎಷ್ಟು?**

☞ ವಿಸ್ತರಿತ ಕಾಯಿಲೆ ಹಿತಲಾಭದ ದರವು 'ನಿಗದಿತ ಹಿತಲಾಭದ ದರ'ಕ್ಕಿಂತ 40% ಹೆಚ್ಚು.

**21. ಎಷ್ಟು ಅವಧಿಯವರೆಗೆ ಈ ಹಿತಲಾಭವನ್ನು ನೀಡಲಾಗುತ್ತದೆ ?**

☞ ಕಾಯಿಲೆ ಹಿತಲಾಭದ 91 ದಿನಗಳು ಮುಗಿದ ನಂತರ ವಿಸ್ತರಿತ ಕಾಯಿಲೆ ಹಿತಲಾಭವನ್ನು 124/ 309 ದಿನಗಳವರೆಗೆ ನೀಡಲಾಗುತ್ತದೆ. ಹೀಗೆ ಕಾಯಿಲೆ ಹಿತಲಾಭದ 91 ದಿನಗಳನ್ನು ಸೇರಿಸಿ ಎಲ್ಲಾ ಉಲ್ಲೇಖಿಸಿದ ಕಾಯಿಲೆಗಳಿಗೆ ಒಟ್ಟು 400 ದಿನಗಳವರೆಗೆ ಹಿತಲಾಭವನ್ನು ನೀಡಲಾಗುತ್ತದೆ ಹಾಗೂ ತೀವ್ರವಾದ ಕಾಯಿಲೆಗಳಲ್ಲಿ ಸೂಕ್ತ ಪ್ರಾಧಿಕಾರದ ಶಿಫಾರಸ್ಸಿನ ಮೇರೆಗೆ 2 ವರ್ಷಗಳವರೆಗೆ ಹಿತಲಾಭವನ್ನು ನೀಡಲಾಗುತ್ತದೆ.

## ವರ್ಧಿತ ಕಾಯಿಲೆ ಹಿತಲಾಭ

**22. ವರ್ಧಿತ ಕಾಯಿಲೆ ಹಿತಲಾಭ ಎಂದರೇನು ?**

☞ ವಿಮಾಕೃತ ವ್ಯಕ್ತಿ ಕುಟುಂಬ ಯೋಜನೆಗಾಗಿ ವ್ಯಾಸೆಕ್ಟಮಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಾಗ ತೆಗೆದುಕೊಳ್ಳುವ ರಜೆಯ ಅವಧಿಗೆ ನೀಡುವ ನಗದು ಹಿತಲಾಭ.

**(ಎ) ವಂತಿಗೆ ನಿಯಮಗಳೇನು ?**

☞ ಕಾಯಿಲೆ ಹಿತಲಾಭದ ವಂತಿಗೆ ನಿಯಮವೇ ಇದಕ್ಕೂ ಅನ್ವಯವಾಗುತ್ತದೆ.

**(ಬಿ) ಈ ಹಿತಲಾಭದ ದರವೇನು ?**

☞ ಈ ಹಿತಲಾಭದ ದೈನಿಕದರ ನಿಗದಿತ ಹಿತಲಾಭದ ದರದ ಎರಡರಷ್ಟು ಅಂದರೆ ದೈನಿಕ ವೇತನಕ್ಕಿಂತ ಕಡಿಮೆ ಇರುವುದಿಲ್ಲ.

## (ಸಿ) ಈ ಹಿತಲಾಭದ ಅವಧಿ ಏನು ?

☞ ಈ ಹಿತಲಾಭವನ್ನು ವ್ಯಾಸೆಕ್ಟೆಮಿಗೆ 7 ದಿನಗಳವರೆಗೆ ಹಾಗೂ ಟ್ಯುಬೆಕ್ಟಮಿ ಶಸ್ತ್ರಚಿಕಿತ್ಸೆಗೆ 14 ದಿನಗಳವರೆಗೆ ನೀಡಲಾಗುತ್ತದೆ. ಇದಲ್ಲದೆ ಶಸ್ತ್ರಚಿಕಿತ್ಸೆಯ ನಂತರದಲ್ಲಿ ತೊಂದರೆಗಳುಂಟಾದಲ್ಲಿ ಅಥವಾ ಶಸ್ತ್ರಚಿಕಿತ್ಸೆಯಿಂದ ಕಾಯಿಲೆ ಉಂಟಾದಲ್ಲಿ ಈ ಅವಧಿಯನ್ನು ಹೆಚ್ಚಿಸಲಾಗುತ್ತದೆ. ಈ ಹಿತಲಾಭದ ಅವಧಿಯು ನಿರಂತರ ಎರಡು ಹಿತಲಾಭದ ಅವಧಿಯಲ್ಲಿ ದೊರೆಯುವ 91 ದಿನಗಳ ಕಾಯಿಲೆ ಹಿತಲಾಭದ ಅವಧಿಯಲ್ಲಿ ಎಣಿಸಲ್ಪಡುವುದಿಲ್ಲ.

## (ಡಿ) ಕಾಯಿಲೆ ಹಿತಲಾಭದ ಕೋರಿಕೆ ಸಲ್ಲಿಸುವುದು ಹೇಗೆ ?

☞ ವಿಮಾ ವೈದ್ಯಾಧಿಕಾರಿ / ಉದ್ಯೋಗನಿರತ ವಿಮಾ ವೈದ್ಯರಿಂದ ಸೂಕ್ತ ಫಾರ್ಮ್‌ನಲ್ಲಿ ನೀಡಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರದ ಜೊತೆಗೆ ಕಾಯಿಲೆ ಹಿತಲಾಭದ ಕೋರಿಕೆಯನ್ನು ಸಲ್ಲಿಸಬೇಕು. ವೈದ್ಯಕೀಯ ಪ್ರಮಾಣ ಪತ್ರಗಳನ್ನು ಏಳು ದಿನಗಳಿಗಿಂತ ಕಡಿಮೆ ಅವಧಿಯ ಅಂತರದಲ್ಲಿ ನೀಡಲಾಗುತ್ತದೆ. ಆದರೆ ದೀರ್ಘಾವಧಿ ಕಾಯಿಲೆಗಳಲ್ಲಿ ವಿಶೇಷ ಮಧ್ಯಂತರ ಪ್ರಮಾಣಪತ್ರಗಳನ್ನು 4 ವಾರಗಳನ್ನು ಮೀರದಂತೆ ದೀರ್ಘ ಅವಧಿಯ ಅಂತರದಲ್ಲಿ ನೀಡಲಾಗುತ್ತದೆ. ವಿಶೇಷ ಮಧ್ಯಂತರ ಸರ್ಟಿಫಿಕೇಟ್ ಹೊರತುಪಡಿಸಿ ಪ್ರತಿ ಪ್ರಮಾಣ ಪತ್ರದ ಹಿಂಬದಿಯಲ್ಲಿ ಕೋರಿಕೆ ಪತ್ರವನ್ನು ಮುದ್ರಿಸಲಾಗಿದೆ. ಕೋರಿಕೆ ಪತ್ರವು ಮುಖ್ಯವಾಗಿ ಕೋರಿಕೆ ಮಾಡುವಾಗ ಹಿತಲಾಭ ಕೋರುವ ಅವಧಿಯಲ್ಲಿ ಕೆಲಸಕ್ಕೆ ಗೈರು ಹಾಜರಾಗಿರುವ ಬಗ್ಗೆ ಮಾಡುವ ಘೋಷಣೆಯನ್ನೊಳಗೊಂಡಿರುತ್ತದೆ. ಪ್ರತ್ಯೇಕ ಕೋರಿಕ ಫಾರ್ಮ್‌ಗಳೂ ಸಹ ಲಭ್ಯವಿವೆ.

ಕೋರಿಕೆ ಪತ್ರದಲ್ಲಿ ಕೋರಿಕೆದಾರನ / ಳ ಸಹಿ ಅಥವಾ ಹೆಬ್ಬೆಟ್ಟಿನ ಗುರುತು ಇರಬೇಕು ಹಾಗೂ ಅದನ್ನು ಶಾಖಾ ಕಛೇರಿಗೆ ಮೂರು ದಿನಗಳ ಒಳಗಾಗಿ, ವೈಯಕ್ತಿಕವಾಗಿ ಅಥವಾ ಅಂಚೆ ಮೂಲಕವಾಗಿ ಅಥವಾ ಇನ್ನೊಬ್ಬರ ಮೂಲಕವಾಗಿ ಅಥವಾ ಶಾಖಾ ಕಛೇರಿಯಲ್ಲಿ ಸರ್ಟಿಫಿಕೇಟ್ ಪೆಟ್ಟಿಗೆ ಇದ್ದರೆ ಅದರಲ್ಲಿ ಹಾಕುವುದರ ಮೂಲಕ ಸಲ್ಲಿಸಬೇಕು. ನಿಮ್ಮ ಕೋರಿಕೆ ಪತ್ರವನ್ನು ಭರ್ತಿ ಮಾಡಲು ಶಾಖಾ ಕಛೇರಿಯ ಸ್ವಾಗತಕಾರರು ನಿಮಗೆ ಸಹಾಯ ಮಾಡುತ್ತಾರೆ.

# ಅಂಗವಿಕಲತೆಯ ಹಿತಲಾಭ

## 23. ಅಂಗವಿಕಲತೆ ಎಂದರೇನು ?

☞ 'ಅಂಗವಿಕಲತೆ' ಎಂದರೆ ವೃತ್ತಿನಿರತನಾಗಿದ್ದಾಗ ಅಥವಾ ವೃತ್ತಿಯಿಂದ ಆದ ಅಪಘಾತದಿಂದ ಉಂಟಾದ ಸ್ಥಿತಿ. ಅದನ್ನು ಕೆಳಗಿನಂತೆ ವಿಂಗಡಿಸಬಹುದು.

ಅ) ತಾತ್ಕಾಲಿಕ ಅಂದರೆ ಮೇಲ್ಕಾಣಿಸಿದ ಅಪಘಾತದಿಂದ ವಿಮಾದಾರನು/ಳು ತಾತ್ಕಾಲಿಕವಾಗಿ ಕೆಲಸ ಮಾಡಲು ಅನರ್ಹನಾಗಿರುತ್ತಾನೆ/ಳೆ ಹಾಗೂ ಆತನಿಗೆ/ ಅವಳಿಗೆ ವೈದ್ಯಕೀಯ ಚಿಕಿತ್ಸೆಯು ಅವಶ್ಯಕವಾಗಿರುತ್ತದೆ.

ಆ) ಭಾಗಶಃ ಶಾಶ್ವತ - ಅಂದರೆ ಅಂಗವಿಕಲತೆಯಿಂದಾಗಿ ವಿಮಾದಾರನ ಗಳಿಕೆಯ ಸಾಮರ್ಥ್ಯ ಸಾಮಾನ್ಯತಃ ಎಲ್ಲಾ ಉದ್ಯೋಗಗಳಲ್ಲೂ ಭಾಗಶಃ ಕಡಿಮೆಯಾಗುತ್ತದೆ.

ಇ) ಸಂಪೂರ್ಣ ಶಾಶ್ವತ ಅಂಗವಿಕಲತೆ - ಅಂದರೆ ವಿಮಾದಾರನು ಎಲ್ಲಾ ಕೆಲಸ ಮಾಡಲು ಅನರ್ಹನಾಗುತ್ತಾನೆ ಹಾಗೂ ಗಳಿಕೆಯ ಸಾಮರ್ಥ್ಯವನ್ನು ಪೂರ್ಣವಾಗಿ ಕಳೆದುಕೊಂಡಿರುತ್ತಾನೆ.

## 24. 'ವೃತ್ತಿಯ ಗಾಯ' ಎಂದರೇನು ?

☞ ವೃತ್ತಿಯ ಗಾಯವೆಂದರೆ - ಇಎಸ್‌ಐ ಕಾಯ್ದೆಯಡಿ ಅನ್ವಯವಾಗುವ ಕಾರ್ಖಾನೆ ಅಥವಾ ಸಂಸ್ಥೆಗಳಲ್ಲಿ ಕೆಲಸ ಮಾಡುವ ವಿಮಾದಾರನಿಗೆ ವೃತ್ತಿಯ ಅವಧಿಯಲ್ಲಿ ಅಥವಾ ವೃತ್ತಿಯಿಂದಾಗಿ ಅಪಘಾತವಾಗುವುದು ಅಥವಾ ವೃತ್ತಿಯ ಕಾರಣದಿಂದಾಗಿ ಕಾಯಿಲೆಯಿಂದ ನರಳುವುದು.

'ವೃತ್ತಿಯ ಗಾಯ'ಕ್ಕೆ ಸಂಬಂಧಪಟ್ಟ ಕಾಯಿದೆಗಳನ್ನು ಉದಾರೀಕರಿಸಲಾಗಿದೆ. ಈಗ, ವೃತ್ತಿಯ ಅವಧಿಯಲ್ಲಿ ಘಟಿಸುವ / ಸಂಭವಿಸುವ ಯಾವುದೇ ಅಪಘಾತವನ್ನು, ಅದಕ್ಕೆ ವಿರುದ್ಧವಾದ ಸಾಕ್ಷ್ಯಗಳಿರದಿದ್ದರೆ, ವೃತ್ತಿಯ ಗಾಯ ಎಂದೇ ಪರಿಗಣಿಸಲಾಗುತ್ತದೆ. ಇದಲ್ಲದೆ, ಯಾವುದೇ ಅವಿಧೇಯತೆಯಿಂದ, ನಿರ್ಲಕ್ಷ್ಯತನದಿಂದ ಅಥವಾ ನಿಯಮಾವಳಿಗಳನ್ನು ಉಲ್ಲಂಘಿಸುವುದರಿಂದ ಅಥವಾ ಮಾಲೀಕರ ವಾಹನದಲ್ಲಿ ಪ್ರಯಾಣಿಸುವಾಗ ಅಥವಾ ತುರ್ತು ಪರಿಸ್ಥಿತಿಯನ್ನು ಎದುರಿಸುವಾಗ ಸಂಭವಿಸುವ ಅಪಘಾತವನ್ನು ಕೆಲವು ಷರತ್ತಿಗೊಳಪಟ್ಟು ವೃತ್ತಿಯಲ್ಲಿ / ವೃತ್ತಿಯಿಂದ ಉಂಟಾದ ಗಾಯವೆಂದು ಪರಿಗಣಿಸಲಾಗುತ್ತದೆ. ಮದ್ಯ / ಮಾದಕಪೇಯ ಅಥವಾ ಮಾದಕ ವಸ್ತುಗಳ ಪ್ರಭಾವದಲ್ಲಿದ್ದಾಗ ಆದ ಗಾಯಗಳು ನೌಕರರ ಈ ಹಿತಲಾಭದ ಹಕ್ಕನ್ನು ಕಸಿದುಕೊಳ್ಳುತ್ತವೆ.

ವೃತ್ತಿಯ ಸ್ಥಳಕ್ಕೆ ಅಥವಾ ವೃತ್ತಿಯ ಸ್ಥಳದಿಂದ ಮನೆಗೆ ಪ್ರಯಾಣಿಸುವಾಗ.... ಆ ಕಾಲದಲ್ಲಿ ಸಂಭವಿಸುವ ಗಾಯ ಅಥವಾ ಸಾವಿನ ಸಂದರ್ಭದಲ್ಲಿ ವೃತ್ತಿಯ ಕಾಲ್ಪನಿಕ ವ್ಯಾಪ್ತಿ ಎಂದು ಪರಿಗಣಿಸಿ ಹಿತಲಾಭವನ್ನು ನೀಡಲಾಗುತ್ತದೆ.

## 25. ವೃತ್ತಿ ಸಂಬಂಧಿತ ಕಾಯಿಲೆಗಳು ಎಂದರೇನು ?

☞ ಯಾವ ಕಾಯಿಲೆಗಳಿಗೆ ಮೂಲವು ವೃತ್ತಿಯಾಗಿರುತ್ತದೋ ಅಂತಹ ಕಾಯಿಲೆಗಳನ್ನು ವೃತ್ತಿ ಸಂಬಂಧಿತ ಕಾಯಿಲೆಗಳು ಎನ್ನುತ್ತಾರ. ಪರಿಹಾರ ಲಭ್ಯವಿರುವ (ಅಂದರೆ ವೃತ್ತಿ ಸಂಬಂಧಿತ ಕಾಯಿಲೆ ಎಂದು ಪರಿಗಣಿಸಲ್ಪಡುವ) ಕಾಯಿಲೆಗಳನ್ನು ಹಾಗೂ ಸಂಬಂಧಿತ ಕಾಯಿಲೆಯುಂಟುಮಾಡುವ ಕೈಗಾರಿಕಾ ಪ್ರಕ್ರಿಯೆಗಳನ್ನು ಇಎಸ್‌ಐ ಕಾಯ್ದೆಯ ಶೆಡ್ಯೂಲ್ III ರಲ್ಲಿ ನಮೂದಿಸಲಾಗಿದೆ. ಅದರಿಂದ ಈ ಕಾಯಿಲೆಗಳನ್ನು ಹೆಚ್ಚಿನ ಪುರಾವೆಯಿಲ್ಲದೆ ಗುರುತಿಸಬಹುದಾಗಿದೆ.

### 26. ಯಾವ ಯಾವ ಹಿತಲಾಭಗಳನ್ನು ಮಂಜೂರು ಮಾಡಲಾಗುತ್ತವೆ ?

☞ ತಾತ್ಕಾಲಿಕ ಅಂಗವಿಕಲತೆಯ ಹಿತಲಾಭವನ್ನು ಅಸಾಮರ್ಥ್ಯತೆಯನ್ನು ತೋರಿಸುವ ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡಿ ನಿಯಮಿತವಾಗಿ ನಿರ್ದಿಷ್ಟ (ಗಾಯ ವಾಸಿಯಾಗುವವರೆಗೂ / ಕೆಲಸಕ್ಕೆ ಹೋಗಲು ವೈದ್ಯಕೀಯವಾಗಿ ಸಮರ್ಥರಾಗುವವರೆಗೂ) ಪಡೆಯಬಹುದಾಗಿದೆ. ಶಾಶ್ವತ ಸಂಪೂರ್ಣ ಅಂಗವಿಕಲತೆ ಹಾಗೂ ಶಾಶ್ವತ ಭಾಗಶಃ ಅಂಗವಿಕಲತೆಯನ್ನು ಪಿಂಚಣಿಯ ರೂಪದಲ್ಲಿ ನೀಡಲಾಗುತ್ತದೆ. ಅಂತಹ ವ್ಯಕ್ತಿಯ ಯಾವುದೇ ವೃತ್ತಿಯಲ್ಲಿದ್ದ ವೇತನ ಪಡೆಯುತ್ತಿದ್ದರೂ ಅಥವಾ ಯಾವುದೇ ಲಾಭದಾಯಕ ಚಟುವಟಿಕೆಯಲ್ಲಿ ತೊಡಗಿದ್ದರೂ ಸಹ ಶಾಶ್ವತ ಅಂಗವಿಕಲತೆಯ ಹಿತಲಾಭವನ್ನು ಪಡೆಯಲು ಯಾವುದೇ ಅಡ್ಡಿಯಿರುವುದಿಲ್ಲ. ವೃತ್ತಿ ಸಂಬಂಧಿತ ಕಾಯಿಲೆ ಯಿಂದ ನರಳುವ ವಿಮಾಕೃತ ವ್ಯಕ್ತಿಪೂರ್ಣ ವೈದ್ಯಕೀಯ ಸೇವೆ / ಚಿಕಿತ್ಸೆ ಸಹ ಪಡೆಯಲು ಅರ್ಹನಾಗಿರು ತ್ತಾನೆ.

### 27. ಹಿತಲಾಭದ ದರಗಳೆಷ್ಟು?

☞ ಶಾಶ್ವತ ಸಂಪೂರ್ಣ ಅಂಗವಿಕಲತೆ ಹಾಗೂ ತಾತ್ಕಾಲಿಕ ಅಂಗವಿಕಲತೆಯ ದರಗಳು ನಿಗದಿತ ಹಿತಲಾಭದ ದರಕ್ಕಿಂತ 40% ಹೆಚ್ಚಿರುತ್ತದೆ. ಅಂದರೆ ಸುಮಾರು ವೇತನದ 70%ರಷ್ಟು ಆಗುತ್ತದೆ. ಶಾಶ್ವತ ಭಾಗಶಃ ಅಂಗವಿಕಲತೆಯ ದರವು ಆ ವ್ಯಕ್ತಿಯ ಗಳಿಕೆ ಸಾಮರ್ಥ್ಯದ ನಷ್ಟದ ಶೇಕಡಾವಾರು ಪ್ರಮಾಣಕ್ಕೆ ಅನುಗುಣವಾಗಿರುತ್ತದೆ. ಈ ಹಿತಲಾಭವನ್ನು ಭಾನುವಾರಗಳಲ್ಲಿ ಕೂಡ ನೀಡಲಾಗುವುದು.

### 28. ವಂತಿಗೆಯ ನಿಯಮಗಳೇನು ?

☞ ನೌಕರಿಯ ಅವಧಿಯ ಬಗ್ಗೆಯಾಗಲೀ ಅಷ್ಟು ದಿನಗಳ ವಂತಿಗೆ ನೀಡಬೇಕು ಎಂಬ ಬಗ್ಗೆಯಾಗಲೀ ಯಾವುದೇ ನಿಯಮಗಳಿರುವುದಿಲ್ಲ. ಕಾಯ್ದೆ ಅನ್ವಯವಾಗುವ ನೌಕರಿಗೆ ಸೇರಿದ ಕ್ಷಣದಿಂದ ಈ ಸಂಬಂಧದ ಸುರಕ್ಷೆ ಲಭ್ಯವಾಗುತ್ತದೆ.

### 29. ಈ ಹಿತಲಾಭದ ಅವಧಿಯೇನು ?

☞ ತಾತ್ಕಾಲಿಕ ಅಂಗ ವಿಕಲತೆಯ ಹಿತಲಾಭವನ್ನು ಅಂಗವಿಕಲತೆ ಇರುವವರೆಗೆ ನೀಡಲಾಗುತ್ತದೆ. ಮೂರು ದಿನಗಳ ನಿರೀಕ್ಷಣಾ ಅವಧಿ (ಅಪಘಾತದ ದಿನವನ್ನು ಹೊರತುಪಡಿಸಿ) ಇರುತ್ತದೆ. ಆದರೆ ಅಸಾಮರ್ಥ್ಯತೆ / ಅಶಕ್ತತೆ ಈ ಅವಧಿಯನ್ನು ಮೀರಿದಲ್ಲಿ ಪ್ರಥಮ ದಿನದಿಂದ (ಅಪಘಾತವಾದ ಮಾರನೇ ದಿನದಿಂದ) ಹಿತಲಾಭವನ್ನು ನೀಡಲಾಗುತ್ತದೆ. ಶಾಶ್ವತ ಅಂಗವಿಕಲತೆಯ ಹಿತಲಾಭವನ್ನು ಫಲಾನುಭವಿಯ ಜೀವನ ಪರ್ಯಂತ ನೀಡಲಾಗುತ್ತದೆ.

## 30. ಶಾಶ್ವತ ಅಂಗವಿಕಲತೆಯನ್ನು ಹೇಗೆ ಮೌಲ್ಯಮಾಪನ ಮಾಡಲಾಗುತ್ತದೆ ?

☞ ಶಾಶ್ವತ ಅಂಗವಿಕಲತೆಗೊಳಗಾದ ನೌಕರನಿಗೆ ಸಾಕಷ್ಟು ಪರಿಹಾರ ಒದಗಿಸುವುದು ಅಸಾಧ್ಯವಾದ ಮಾತು. ಆದರೂ ಸಹ ಶಾಶ್ವತ ಅಂಗವಿಕಲತೆಯು 'ವೃತ್ತಿಯಗಾಯ' ದಿಂದುಂಟಾಗಿದೆಯೇ ಎಂಬುದನ್ನು ನಿರ್ಧರಿಸಲು ಹಾಗೂ ವೃತ್ತಿಗಾಯದಿಂದುಂಟಾದ ಶಾಶ್ವತ ಹಾನಿಯನ್ನು ನಿರ್ಧರಿಸಲು ಹಾಗೂ ತನ್ಮೂಲಕಗಳಿಕೆಯ ಸಾಮರ್ಥ್ಯದ ನಷ್ಟಕ್ಕೆ ಪರಿಹಾರ ನೀಡಲು ಕೆಲವು ವಿಧಾನಗಳನ್ನು ಅನುಸರಿಸಬೇಕಾಗುತ್ತದೆ.

ಈ ನಿಟ್ಟಿನಲ್ಲಿ ಎಲ್ಲಾ ಕೆಲಸಗಳಿಗೆ ಸಂಬಂಧಪಟ್ಟಂತೆ ಸಾಮಾನ್ಯ ಅಸಾಮರ್ಥ್ಯತೆಯನ್ನು ಪರಿಗಣಿಸಿ ಗಳಿಕೆಯ ಸಾಮರ್ಥ್ಯದ ಹಾನಿಯನ್ನು ಅಳೆಯಲಾಗುತ್ತದೆ. ಈ ಗಳಿಕೆಯ ಸಾಮರ್ಥ್ಯದ ಹಾನಿಯ ಶೇಕಡಾವಾರು ಅಂಶದ ನಿರ್ಣಯವನ್ನು ಒಂದು ವೈದ್ಯಕೀಯ ಮಂಡಳಿ ಮಾಡುತ್ತದೆ. ವೈದ್ಯ ಮಂಡಳಿಯ ನಿರ್ಣಯವನ್ನು ಒಬ್ಬ ನ್ಯಾಯಾಂಗ ಅಧಿಕಾರಿಯ ಅಧ್ಯಕ್ಷತೆಯಲ್ಲಿ ನಡೆಸಲಾಗುವ ಮೆಡಿಕಲ್ ಅಪೀಲ್ ಟ್ರಿಬ್ಯುನಲ್ ಮುಂದೆ ಪ್ರಶ್ನಿಸಬಹುದು. ಮೆಡಿಕಲ್ ಅಪೀಲ್ ಟ್ರಿಬ್ಯುನಲ್ ನಿರ್ಣಯದ ವಿರುದ್ಧವೂ ಕೂಡ ನೌಕರರ ವಿಮಾ ನ್ಯಾಯಾಲಯದಲ್ಲಿ ದಾವೆ ಹೂಡುವ ಹಕ್ಕು ವಿಮಾದಾರನಿಗೆ ನಿಗಮಕ್ಕೆ ಈ ಸಂಬಂಧ ಗೊತ್ತುಮಾಡಿದ ದರಗಳಿಗನುಗುಣವಾಗಿ ನೀಡುತ್ತದೆ.

ವೈದ್ಯಕೀಯ ಮಂಡಳಿಯ ನಿರ್ಣಯವು ಅಂತಿಮವಾಗಿರದೇ ತಾತ್ಕಾಲಿಕವಾಗಿದ್ದಲ್ಲಿ ಫಲಾನುಭವಿಯು ಇನ್ನೊಮ್ಮೆ ವೈದ್ಯ ಮಂಡಳಿಯ ಎದುರು ಹಿಂದಿನ ನಿರ್ಣಯದ ಪುನರ್ ಪರಿಶೀಲನೆಗಾಗಿ ಹಾಜರಾಗಬೇಕಾಗಿರುತ್ತದೆ.

## 31. ವೈದ್ಯಕೀಯ ಮಂಡಳಿಯ ಅಥವಾ ಮೆಡಿಕಲ್ ಅಪೀಲ್ ಟ್ರಿಬ್ಯುನಲ್‌ನ ನಿರ್ಣಯವನ್ನು ಮರು ಪರಿಶೀಲಿಸಬಹುದೇ ?

☞ ಹೌದು, ವೈದ್ಯಕೀಯ ಮಂಡಳಿಯ ಅಥವಾ ಮೆಡಿಕಲ್ ಅಪೀಲ್ ಟ್ರಿಬ್ಯುನಲ್ ತಾನು ಈ ಹಿಂದೆ ನೀಡಿದ ತೀರ್ಮಾನವನ್ನು ಅದು ಹಿಂದೆ ತಿಳಿಸಲಾಗಿರದಿದ್ದ ಯಾವುದೇ ಅಂಶದಿಂದಾಗಿ ಅಥವಾ ಹಿಂದೆ ತಿಳಿಸಿದ ಅಂಶವು ತಪ್ಪಾಗಿದ್ದಲ್ಲಿ ಈ ಬಗ್ಗೆ ಸೂಕ್ತ ಪುರಾವೆ ದೊರೆತಲ್ಲಿ ತನ್ನ ಹಿಂದಿನ ತೀರ್ಮಾನವನ್ನು ಯಾವುದೇ ಸಮಯದಲ್ಲೂ ಬದಲಾಯಿಸಬಹುದು.

ಸದರಿ ವೃತ್ತಿಗಾಯದ ದುಷ್ಪರಿಣಾಮವು ಗಣನೀಯವಾಗಿ ಹಾಗೂ ಊಹಿಸಲಾಗದ ರೀತಿಯಲ್ಲಿ ವೃದ್ಧಿಯಾಗಿದೆ ಎಂದು ಕಂಡು ಬಂದಲ್ಲಿ ಹಾಗೂ ತನ್ನ ಹಿಂದಿನ ತೀರ್ಮಾನವನ್ನು ಪುನರ್ ಪರಿಶೀಲಿಸದಿದ್ದರೆ ಗಣನೀಯವಾಗಿ ಅನ್ಯಾಯವಾಗುವುದೆಂದು ಅನಿಸಿದಲ್ಲಿ ವೈದ್ಯ ಮಂಡಳಿಯು ತನ್ನ ಹಿಂದಿನ ಅಂಗವಿಕಲತೆಯ ವ್ಯಾಪ್ತಿಯ ನಿರ್ಣಯವನ್ನು ಮರುಪರಿಶೀಲಿಸಬಹುದು. ಆದರೆ ಈ ರೀತಿಯ ಮರು ಪರಿಶೀಲನೆಯು ಐದು ವರ್ಷಗಳಿಗಿಂತ ಮುಂಚೆ ಮಾಡಲಾಗುವುದಿಲ್ಲ ಹಾಗೂ ತಾತ್ಕಾಲಿಕ ಅಥವಾ ಹಂಗಾಮಿ ತೀರ್ಮಾನವಾದಲ್ಲಿ ಮರು ಪರಿಶೀಲನೆ ಮಾಡಬೇಕಾದ ದಿನಾಂಕದಿಂದ 6 ತಿಂಗಳ ಒಳಗೆ ಮಾಡಲಾಗುವುದಿಲ್ಲ.

**32. ಪಿಂಚಣಿಯ ಬದಲಾಗಿ ಒಟ್ಟಾಗಿ ಹಿತಲಾಭವನ್ನು (ಒಟ್ಟು ಮೊತ್ತದ ಹಿತಲಾಭವನ್ನು) ಪಡೆಯಬಹುದೇ ?**

☞ ಹೌದು. ದೈನಿಕ ಹಿತಲಾಭದ ದರವು ಗಣನೀಯವಾಗಿ ಕಡಿಮೆಯಾಗಿದ್ದಲ್ಲಿ ಶಾಶ್ವತ ಅಂಗವಿಕಲತೆಯ ಹಿತಲಾಭದ ಫಲಾನುಭವಿಯ ಆಯ್ಕೆಗನುಗುಣವಾಗಿ ಈ ಕೆಳಕಂಡ ಎರಡು ಷರತ್ತಿಗೊಳಪಟ್ಟು ಪಿಂಚಣಿಯ ಬದಲಾಗಿ ಒಟ್ಟು ಮೊತ್ತವನ್ನು ಪಡೆಯಬಹುದು.

1) ಶಾಶ್ವತ ಅಂಗವಿಕಲತೆಯು ಅಂತಿಮವಾಗಿ ತೀರ್ಮಾನವಾಗಿರಬೇಕು.

2) ಶಾಶ್ವತ ಅಂಗವಿಕಲತೆಯ ಹಿತಲಾಭದ ದೈನಿಕ ದರವು ರೂ. 5ನ್ನು ಮೀರಿರಬಾರದು ಹಾಗೂ ಹಿತಲಾಭದ ಒಟ್ಟು ಮೊತ್ತವು ರೂ. 30,000 ವನ್ನು ಮೀರಬಾರದು.

**33. ಅಂಗವಿಕಲತೆ ಹಿತಲಾಭಕ್ಕಾಗಿ ಕೋರಿಕೆ ಸಲ್ಲಿಸುವುದು ಹೇಗೆ ?**

☞ **ಅ) ತಾತ್ಕಾಲಿಕ ಅಂಗವಿಕಲತೆ :**

i) ಗಾಯಗೊಂಡ ಬಗ್ಗೆ ವರದಿಯನ್ನು ಖುದ್ದಾಗಿ - ಮೌಖಿಕವಾಗಿ ಅಥವಾ ಲಿಖಿತ ರೂಪದಲ್ಲಿ ಅಥವಾ ಏಜೆಂಟರ ಮುಖಾಂತರ ಮಾಲೀಕರಿಗೆ / ಫೋರ್‌ಮನ್‌ಗೆ/ ಡ್ಯೂಟಿ ಸೂಪರ್‌ವೈಸರ್‌ಗೆ ನೀಡಬೇಕು ಅಥವಾ ಕಾರ್ಖಾನೆಯಲ್ಲಿ ಅಪಘಾತದ ಪುಸ್ತಕವಿದ್ದಲ್ಲಿ ಖುದ್ದಾಗಿ ಅಥವಾ ಯಾರ ಮುಖಾಂತರವಾದರೂ ಅದರಲ್ಲಿ ಉಲ್ಲೇಖಿಸಬೇಕು.

ii) ವಿಮಾ ವೈದ್ಯಾಧಿಕಾರಿ / ಉದ್ಯೋಗನಿರತ ವಿಮಾ ವೈದ್ಯರಿಂದ ಅಸಮರ್ಥನೆಯ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರ ಪಡೆಯಬೇಕು.

iii) ವೈದ್ಯಕೀಯ ಪ್ರಮಾಣಪತ್ರದ ಹಿಂಭಾಗದಲ್ಲಿ ಮುದ್ರಿಸಲಾಗಿರುವ ಕೋರಿಕೆ ಪತ್ರವನ್ನು ಭರ್ತಿಮಾಡಿ, ಶಾಖಾ ಕಚೇರಿಗೆ ಸಕಾಲದಲ್ಲಿ ಸಲ್ಲಿಸಬೇಕು.

iv) ಕೆಲಸಕ್ಕೆ ಪುನಃ ಹಾಜರಾಗುವ ಮುನ್ನ ಅಂತಿಮ ವೈದ್ಯಕೀಯ ಪ್ರಮಾಣ ಪತ್ರವನ್ನು ವೈದ್ಯ ವಿಮಾ ಅಧಿಕಾರಿಯಿಂದ ಅಥವಾ ಉದ್ಯೋಗ ನಿರತ ವಿಮಾ ವೈದ್ಯರಿಂದ ಪಡೆದು ಶಾಖಾ ಕಚೇರಿಗೆ ಸಲ್ಲಿಸಬೇಕು.

**ಬಿ) ಶಾಶ್ವತ ಅಂಗವಿಕಲತೆ :**

i) 'ವೃತ್ತಿ ಗಾಯ'ದ ಶಾಶ್ವತ ಪರಿಣಾಮಗಳಿಂದ ನರಳುತ್ತಿದ್ದರೆ, ವಿಮಾದಾರರು ತಮ್ಮ ಕೇಸನ್ನು ವೈದ್ಯಕೀಯ ಮಂಡಳಿಯ ಮುಂದಿರಿಸುವಂತೆ ನಿಗಮದ ಪ್ರಾದೇಶಿಕ ಕಾರ್ಯಾಲಯಕ್ಕೆ ಒಂದು ಅರ್ಜಿ ನೀಡಬೇಕು. (ಹಾಗಿಲ್ಲದೆ ಪ್ರಾದೇಶಿಕ ಕಾರ್ಯಾಲಯವೂ ಕೂಡ ವೈದ್ಯಕೀಯ ಮಂಡಳಿಗೆ ಶಿಫಾರಸ್ಸು ಮಾಡಬಹುದು).

ii) ವೃತ್ತಿ ಸಾಮರ್ಥ್ಯದ ಹಾನಿಯನ್ನು ತೀರ್ಮಾನ ಮಾಡಿ ಆ ತೀರ್ಮಾನ/ನಿರ್ಣಯವನ್ನು ವಿಮಾದಾರನಿಗೆ ತಿಳಿಸಿದ್ದ ಪಕ್ಷದಲ್ಲಿ ಆತ ಶಾಖಾ ಕಾರ್ಯಾಲಯದಲ್ಲಿ ಸೂಕ್ತ ಕೋರಿಕೆ ಪತ್ರದಲ್ಲಿ ಕೋರಿಕೆ ಸಲ್ಲಿಸಬೇಕು.

iii) ಕೋರಿಕೆ ಸ್ವೀಕೃತವಾದನಂತರ, ಫಲಾನುಭವಿಯು ಆರು ತಿಂಗಳಿಗೊಮ್ಮೆ (ಪ್ರತಿವರ್ಷ ಜೂನ್ ಹಾಗೂ ಡಿಸೆಂಬರ್ ತಿಂಗಳ ಕೋರಿಕೆಯೊಡನೆ) ಗೊತ್ತುಮಾಡಿದ ಅನುಶಾಸಿತ ಪ್ರಾಧಿಕಾರದಿಂದ ಜೀವಂತವಿರುವ ಬಗ್ಗೆ ಪ್ರಮಾಣ ಪತ್ರವನ್ನು ಸೂಕ್ತಫಾರ್ಮಿನಲ್ಲಿ ಸಲ್ಲಿಸಬೇಕು.

### 34. ಯಾವುದೇ ದೈಹಿಕ ಪುನಶ್ಚೇತನದ ವ್ಯವಸ್ಥೆಯಿದೆಯೇ ?

☞ ಹೌದು. ವೃತ್ತಿಗಾಯದಿಂದ ವಿಮಾದಾರನು ದೈಹಿಕವಾಗಿ ಅಂಗವಿಕಲನಾದರೆ, ಆತನಿಗೆ ಕೃತಕ ಉಪಕರಣಗಳನ್ನು ನೀಡಲಾಗುವುದು ಅಥವಾ ಗಾಲಿಖುರ್ಚಿ, ಊರುಗೋಲು, ಕೃತಕ ದಂತಪಂಕ್ತಿ ಹಾಗೂ ಕನ್ನಡಕ ಮುಂತಾದ ಪೂರಕ ಉಪಕರಣಗಳನ್ನು ನೀಡಲಾಗುವುದು.

### 35. ವೃತ್ತಿಯ ಪುನರ್ವಸತಿಯ ಬಗ್ಗೆ ಏನು ವ್ಯವಸ್ಥೆಯಿದೆ ?

☞ ವಿಮಾದಾರನು ಶೇಕಡಾ 40ಕ್ಕಿಂತ ಹೆಚ್ಚಿನ ಅಂಗವಿಕಲತೆ ಉಳ್ಳವನಾಗಿದ್ದಾನೆಂದು ತೀರ್ಮಾನವಾಗಿದ್ದರೆ ಹಾಗೂ ಫಲಾನುಭವಿಯು 45 ವರ್ಷಕ್ಕಿಂತ ಕಡಿಮೆ ವಯಸ್ಸಿನವನಾಗಿದ್ದರೆ, ನಿಗಮವು ತನ್ನ ಖರ್ಚಿನಲ್ಲಿ ವೃತ್ತಿ ಸಂಬಂಧಿ ಪುನರ್ವಸತಿಯನ್ನು ವ್ಯವಸ್ಥೆ ಮಾಡುತ್ತದೆ. ಭಾರತ ಸರ್ಕಾರದಿಂದ ನಡೆಸಲ್ಪಡುವ ವೃತ್ತಿ ಸಂಬಂಧಿ ಪುನರ್ವಸತಿ ಕೇಂದ್ರಗಳಲ್ಲಿ ತರಬೇತಿ ನೀಡಲಾಗುತ್ತದೆ. ಸಂಚಾರ ವೆಚ್ಚ ತರಬೇತಿ ಶುಲ್ಕ ಇತ್ಯಾದಿಯನ್ನು ನಿಗಮವು ಭರಿಸುತ್ತದೆ.

### 36. ಆಶ್ರಿತರ ಹಿತಲಾಭ ಎಂದರೇನು ?

☞ ವಿಮಾದಾರನು 'ವೃತ್ತಿಗಾಯ'ದಿಂದ ಅಥವಾ ವೃತ್ತಿಸಂಬಂಧೀ ಕಾಯಿಲೆಯಿಂದ ಮೃತನಾದರೇ, ಆತನ / ಆವಳ ಅರ್ಹ ಅವಲಂಬಿತರಿಗೆ ನೀಡುವ ಮಾಸಿಕ ಪಿಂಚಣಿಯನ್ನು ಆಶ್ರಿತರ ಹಿತಲಾಭ ಎನ್ನುತ್ತಾರೆ.

### 37. ಇದರ ಫಲಾನುಭವಿಗಳು ಯಾರು ಯಾರು ಹಾಗೂ ಎಷ್ಟು ಕಾಲದವರೆಗೆ ಈ ಹಿತಲಾಭವನ್ನು ಪಡೆದುಕೊಳ್ಳಬಹುದು ?

☞ ಈ ಕೆಳಗಿನ ಅವಲಂಬಿತರು ಈ ಹಿತಲಾಭವನ್ನು ಪಡೆದುಕೊಳ್ಳಬಹುದು.

ಅ) ವೃತ್ತಿಗಾಯದಿಂದ ಮೃತನಾದ ವಿಮಾದಾರನ ವಿಧವಾ ಪತ್ನಿಗೆ ಜೀವನ ಪರ್ಯಂತ ಅಥವಾ ಮರು ಮದುವೆ ಆಗುವವರೆಗೆ

ಬ) ಔರಸ ಅಥವಾ ದತ್ತು ಪುತ್ರ - 18 ವರ್ಷದವರೆಗೆ ಅಥವಾ ಔರಸಪುತ್ರ ದುರ್ಬಲ/ ಮಾನಸಿಕವಾಗಿ ಅಸ್ವಸ್ಥನಾಗಿದ್ದಲ್ಲಿ ಅಸ್ವಸ್ಥತೆ ಗುಣವಾಗುವ ತನಕ

ಕ) ಅವಿವಾಹಿತ ಔರಸ ಅಥವಾ ದತ್ತುಪುತ್ರಿ - 18 ವರ್ಷದವರೆಗೆ ಅಥವಾ ವಿವಾಹವಾಗುವ ತನಕ ಯಾವುದು ಮುಂಚೆ ಆಗುವುದೋ ಅಲ್ಲಿಯತನಕ ಅಥವಾ ಮಾನಸಿಕ ಅಸ್ವಸ್ಥತೆ ಗುಣವಾಗುವ ತನಕ ಅಥವಾ ಆಕೆ ಅವಿವಾಹಿತೆಯಾಗಿರುವ ತನಕ.

ಒಂದು ವೇಳೆ ವಿಧವೆ ಅಥವಾ ಔರಸ ಪುತ್ರರು ಇಲ್ಲದಿದ್ದಲ್ಲಿ ತಂದೆ-ತಾಯಿ, ಅಜ್ಜ-ಅಜ್ಜಿಗೆ ಜೀವನ ಪರ್ಯಂತ ನೀಡಲಾಗುವುದು ಅಥವಾ ಯಾವುದೇ ಪುರುಷ ಆಶ್ರಿತರಿಗೆ 18 ವರ್ಷವಾಗುವವರೆಗೆ ಅಥವಾ ಅವಿವಾಹಿತ ಅಥವಾ ವಿಧವೆ ಸ್ತ್ರೀಗೆ 18 ವರ್ಷವಾಗುವವರೆಗೆ ನೀಡಲಾಗುವುದು.

## 38. ಪ್ರತಿಯೊಬ್ಬ ಫಲಾನುಭವಿಗೆ ನೀಡಲಾಗುವ ಹಿತಲಾಭವೆಷ್ಟು ?

☞ ಪ್ರತಿ ಆಶ್ರಿತರಿಗೆ ವಿಭಜಿಸಿ ನೀಡಲಾಗುವ ಹಿತಲಾಭದ ಒಟ್ಟು ಮೊತ್ತವು ತಾತ್ಕಾಲಿಕ ಅಂಗವಿಕಲತೆಯ ಹಿತಲಾಭದಷ್ಟಿರುತ್ತದೆ (ಸುಮಾರು ವೇತನದ 70%ರಷ್ಟು) ವಿಧವೆ / ವಿಧವೆಯರು ಹಿತಲಾಭದ 3/5ರಷ್ಟು ಭಾಗಕ್ಕೆ ಅರ್ಹರಾಗಿರುತ್ತಾರೆ. ಹಾಗೂ ವಾರಸ ಅಥವಾ ದತ್ತುಪುತ್ರ ಮತ್ತು ಪುತ್ರಿ ಹಿತಲಾಭದ 2/5ರಷ್ಟು ಭಾಗಕ್ಕೆ ಅರ್ಹರಾಗಿರುತ್ತಾರೆ. ಹೀಗೆ ವಿಭಜಿಸಲಾದ ಒಟ್ಟು ಮೊತ್ತವು ಪೂರ್ಣದರ (ಅಂದರೆ ತಾತ್ಕಾಲಿಕ ಅಂಗವಿಕಲತೆಯ ಹಿತಲಾಭದ ದರ)ವನ್ನು ಮೀರಿದರೆ, ಫಲಾನುಭವಿಗಳ ಹಿತಲಾಭದಲ್ಲಿ ಅವರವರ ಭಾಗದ ಮೊತ್ತವನ್ನು ಸೂಕ್ತ ಪ್ರಮಾಣಕ್ಕನುಗುಣವಾಗಿ ಕಡಿಮೆಗೊಳಿಸಲಾಗುತ್ತದೆ.

## 39. ಆಶ್ರಿತರ ಹಿತಲಾಭಕ್ಕೆ ಕೋರಿಕೆ ಸಲ್ಲಿಸುವುದು ಹೇಗೆ ?

☞ ಆಶ್ರಿತರ ಹಿತಲಾಭವನ್ನು ಪಡೆಯಲು ತಮ್ಮ ಅರ್ಹತೆಯನ್ನು ದಾಖಲಿಸಲು ಈ ಕೆಳಗಿನ ದಾಖಲಾತಿಗಳನ್ನು ಶಾಖಾ ಕಛೇರಿಯಲ್ಲಿ ಸಲ್ಲಿಸಬೇಕು.

ಅ) ಸೂಕ್ತವಾದ ಫಾರ್ಮಿನಲ್ಲಿ ಕೋರಿಕೆ ಸಲ್ಲಿಸಬೇಕು.

ಬ) ಮರಣವು 'ವೃತ್ತಿಗಾಯ'ದಿಂದುಂಟಾಗಿದೆ ಎಂಬುದಕ್ಕಾಗಿ ಸಾಕ್ಷ್ಯ.

ಕ) ಕೋರಿಕೆ ಸಲ್ಲಿಸುತ್ತಿದ್ದವರು ಮೃತವ್ಯಕ್ತಿಯ 'ಆಶ್ರಿತ'ರಾಗಿದ್ದರು ಎಂಬುದನ್ನು ಬಲಪಡಿಸಲು ಮೃತ ವ್ಯಕ್ತಿಯೊಡನಿದ್ದ ಸಂಬಂಧದ ಸಾಕ್ಷ್ಯ.

ಡ) ಕೋರಿಕೆ ಸಲ್ಲಿಸುತ್ತಿರುವವರ ವಯಸ್ಸಿನ ಪುರಾವೆ (ಜನನ ದಾಖಲಾತಿ, ಬ್ಯಾಪ್ಟಿಸ್ಟಲ್ ರಿಜಿಸ್ಟರ್, ಶಾಲಾದಾಖಲಾತಿ, ಮೂಲ ಜಾತಕ ಇತ್ಯಾದಿಗಳ ದೃಢೀಕೃತ ಪ್ರತಿ)

ಇ) ವಾರಸ ಮಾನಸಿಕ ಅಸ್ವಸ್ಥ / ದುರ್ಬಲ ಮಗ ಅಥವಾ ವಾರಸ ಅಥವಾ ದತ್ತು ಪಡೆದ ಅವಿವಾಹಿತ ಮಾನಸಿಕ ಅಸ್ವಸ್ಥ ಪುತ್ರಿ ಇವರ ಮಾನಸಿಕ ಅಸ್ವಸ್ಥತೆ / ದುರ್ಬಲತೆಯ ಬಗ್ಗೆ ಚಿಕಿತ್ಸಾ ನಿರ್ದೇಶಕರಿಂದ ಅಥವಾ ಸೂಚಿತ ಪ್ರಾಧಿಕಾರದಿಂದ ಪ್ರಮಾಣಪತ್ರ.

ಆಶ್ರಿತರ ಹಿತಲಾಭದ ಕೋರಿಕೆಯ ಸ್ವೀಕೃತವಾದ ನಂತರ ಫಲಾನುಭವಿಯು ಆರು ತಿಂಗಳಿಗೊಮ್ಮೆ (ಜೂನ್ ಹಾಗೂ ಡಿಸೆಂಬರ್ ತಿಂಗಳ ಕೋರಿಕೆಯೊಡನೆ) ಜೀವಂತವಾಗಿರುವ ಬಗ್ಗೆ ವಿವಾಹವಾಗಿಲ್ಲ / ಮರು ವಿವಾಹವಾಗಿಲ್ಲ ಎಂಬುದಕ್ಕಾಗಿ, ನಿಗದಿತ ಪ್ರಾಯ ತಲುಪಿಲ್ಲ ಎಂಬುದಕ್ಕಾಗಿ, ಇನ್ನೂ ಮಾನಸಿಕ ಅಸ್ವಸ್ಥರಾಗಿದ್ದಾರೆ ಎಂಬುದರ ಬಗ್ಗೆ (ಯಾವುದು ಅವಶ್ಯಕವೋ ಅದನ್ನು) ಹೇಳಿಕೆ ನೀಡಬೇಕಾಗುತ್ತದೆ ಹಾಗೂ ಇದನ್ನು ಸೂಚಿತ ಅನುಶಾಸಿತ ಪ್ರಾಧಿಕಾರ (priscribed authority) ದಿಂದ ದೃಢೀಕರಿಸಬೇಕು.

## 40. ಆಶ್ರಿತರ ಹಿತಲಾಭವನ್ನು ಮರು ಪರಿಶೀಲಿಸಬಹುದೇ ?

☞ ಹೌದು. ಸರಿಯಾದ ಅಂಶಗಳನ್ನು / ಸತ್ಯಾಂಶವನ್ನು ಸರಿಯಾದ ರೀತಿಯಲ್ಲಿ ತಿಳಿಸದೇ ಇದ್ದ ಬಗ್ಗೆ ಅಥವಾ ಸತ್ಯಾಂಶವನ್ನು ಮರೆಮಾಚಿದ ಬಗ್ಗೆ ಸರಿಯಾದ ಪುರಾವೆ ದೊರೆತು ಈ ಬಗ್ಗೆ ನಿಗಮಕ್ಕೆ ತೃಪ್ತಿಯಾದಲ್ಲಿ ಆಶ್ರಿತರ ಹಿತಲಾಭವನ್ನು ಯಾವುದೇ ಸಮಯದಲ್ಲಿ ಸಹ ಮರು ಪರಿಶೀಲಿಸಬಹುದು. ಫಲಾನುಭವಿ / ಕೋರಿಕೆ ನೀಡುವಾತನ ಜನನ, ಮರಣ, ವಿವಾಹ, ಮರುವಿವಾಹ ಹಾಗೂ ಅವನಿಗೆ 18 ವರ್ಷವಾದಾಗ ಸಹ ಆಶ್ರಿತರ ಹಿತಲಾಭವನ್ನು ಮರು ಪರಿಶೀಲಿಸಬಹುದು. ಹಿತಲಾಭವನ್ನು ಮುಂದುವರಿಸಬಹುದು, ಹೆಚ್ಚಿಸಬಹುದು, ಕಡಿಮೆ ಮಾಡಬಹುದು ಅಥವಾ ರದ್ದುಪಡಿಸಬಹುದು.

# ಮಾತೃತ್ವದ ಹಿತಲಾಭ

## 41. ಮಾತೃತ್ವದ ಹಿತಲಾಭ ಎಂದರೇನು ?

☞ ವಿಮಾದಾರಳಿಗೆ ಹೆರಿಗೆಯಾದಾಗ ಅಥವಾ ಗರ್ಭಪಾತವಾದಾಗ ಅಥವಾ ಗರ್ಭಾವಸ್ಥೆಯ ಕಾರಣದಿಂದ / ಹೆರಿಗೆಯಿಂದ / ಅವಧಿಗೆ ಮುಂಚೆ ಹೆರಿಗೆಯಾದ ಕಾರಣದಿಂದ / ಗರ್ಭಪಾತ ದಿಂದಾಗಿ ಕಾಯಿಲೆ ಉಂಟಾದಲ್ಲಿ ನೀಡಲಾಗುವ ನಗದು ಹಿತಲಾಭವನ್ನು ಮಾತೃತ್ವದ ಹಿತಲಾಭ ಎನ್ನಲಾಗುತ್ತದೆ.

'ಪ್ರಸವ' ಎಂದರೆ ಜೀವಂತ ಮಗುವಿನ ಜನನ ಅಥವಾ 26 ವಾರಗಳ ಗರ್ಭಾವಸ್ಥೆಯ ನಂತರ ಮೃತ ಶಿಶು ಅಥವಾ ಜೀವಂತ ಶಿಶುವಿನ ಜನನಕ್ಕೆ ಕಾರಣವಾಗುವ ಹೆರಿಗೆ. 'ಗರ್ಭಪಾತ'ವೆಂದರೆ ಗರ್ಭ

ಧರಿಸಿದ 26 ವಾರಗಳೊಳಗಿನ ಅವಧಿಯಲ್ಲಿ ಅಥವಾ 26ನೇ ವಾರದಲ್ಲಿ ಗರ್ಭಾಶಯದಲ್ಲಿರುವ ಭ್ರೂಣ ನಷ್ಟವಾಗುವುದು. ಆದರೆ ಕಾನೂನು ಬಾಹಿರ ಗರ್ಭಪಾತಕ್ಕೆ ಈ ಹಿತಲಾಭ ಲಭ್ಯವಿಲ್ಲ.

### 42. ವಂತಿಗೆ ನಿಯಮಗಳೇನು ?

☞ ಈ ಆರ್ಥಿಕ ಸಹಾಯ ಪಡೆಯಲು ವಿಮಾ ಕಾರ್ಮಿಕಳು ಪ್ರಸವಿಸಿದ / ಗರ್ಭಪಾತವಾದ ತಾರೀಕು ಅಥವಾ ಹೆರಿಗೆಯ ದಿನವು ಯಾವ ಹಿತಲಾಭದ ಅವಧಿ (benefit period)ಯಲ್ಲಿ ಬರುತ್ತದೋ, ಆ ಹಿತಲಾಭದ ಅವಧಿಯ ಪ್ರಾರಂಭದ ದಿನದ ತತ್‌ಕ್ಷಣದ ಹಿಂದಿನ ಎರಡು ಅನುಕ್ರಮ ವಂತಿಗೆ ಅವಧಿಯಲ್ಲಿ ಕನಿಷ್ಠ 70 ದಿನಗಳ ವಂತಿಗೆ ಸಲ್ಲಿಸಿದ್ದಲ್ಲಿ ಮಾತ್ರ ವಿಮಾದಾರಳು ಈ ಹಿತಲಾಭ ಪಡೆಯಲು ಅರ್ಹಳಾಗಿರುತ್ತಾಳೆ.

### 43. ಹಿತಲಾಭದ ದರವೇನು ?

☞ ಮಾತೃತ್ವದ ಹಿತಲಾಭದ ದರವು ಕಾಯಿಲೆ ಹಿತಲಾಭದ ದರದ ಎರಡರಷ್ಟಿರುತ್ತದೆ. ಅಂದರೆ ಸುಮಾರು ಪೂರ್ಣ ವೇತನಕ್ಕೆ ಸಮಾನವಾಗಿರುತ್ತದೆ. ಭಾನುವಾರಗಳಿಗೂ ಸಹ ಹಿತಲಾಭವನ್ನು ಪಾವತಿಸಲಾಗುತ್ತದೆ.

### 44. ಹಿತಲಾಭದ ಕಾಲಾವಧಿ ಏನು ?

☞ ಹಿತಲಾಭವನ್ನು ಈ ಕೆಳಗಿನಂತೆ ನೀಡಲಾಗುತ್ತದೆ.

ಅ) ಪ್ರಸವಕ್ಕಾಗಿ : ಒಟ್ಟು ಹನ್ನೆರಡು ವಾರಗಳ ಅವಧಿಯವರೆಗಿನ ಈ ಹಿತಲಾಭವನ್ನು ನಿರೀಕ್ಷಿತ ಪ್ರಸವದ ದಿನಾಂಕಕ್ಕಿಂತ ಆರು ವಾರಗಳ ಮುಂಚಿನಿಂದ ಪಡೆಯಬಹುದಾಗಿರುತ್ತದೆ. ಒಂದು ವೇಳೆ ವಿಮಾದಾರಳು ಪ್ರಸವದಲ್ಲಿ ಅಥವಾ ಪ್ರಸವದ ನಂತರ ಆರು ವಾರಗಳೊಳಗಾಗಿ ಮಗುವನ್ನು ಅನಾಥವನ್ನಾಗಿ ಮಾಡಿ ಮೃತಳಾದರೆ ಕೂಡ ಈ ಹಿತಲಾಭವನ್ನು ಪೂರ್ಣ ಅವಧಿಯವರೆಗೆ ನೀಡಲಾಗುತ್ತದೆ. ಆದರೆ ಈ ಅವಧಿಯಲ್ಲಿ ಮಗುವೂ ಕೂಡ ಮೃತವಾದರೆ, ಮಗುವಿನ ಮರಣದ ದಿನಾಂಕದವರೆಗೆ ಈ ಹಿತಲಾಭವನ್ನು ನೀಡಲಾಗುತ್ತಾರೆ.

ಬ) ಗರ್ಭಪಾತಕ್ಕಾಗಿ : ಗರ್ಭಪಾತವಾದ ಮರು ದಿನದಿಂದ 6 ವಾರಗಳವರೆಗೆ ಈ ಹಿತಲಾಭವನ್ನು ನೀಡಲಾಗುವುದು.

ಕ) ಗರ್ಭಾವಸ್ಥೆ ಪ್ರಸವ, ಅವಧಿಗೆ ಮುಂಚೆ ಮಗುವಿನ ಜನನ ಅಥವಾ ಗರ್ಭಪಾತದ ಕಾರಣಗಳಿಂದಾಗಿ ಕಾಯಿಲೆ ಉಂಟಾದರೆ : ನಾಲ್ಕುವಾರಗಳ ಹೆಚ್ಚುವರಿ ಅವಧಿಯವರೆಗೆ ಈ ಹಿತಲಾಭವನ್ನು ನೀಡಲಾಗುವುದು.

ಮೇಲಿನ ಎಲ್ಲಾ ಸಂದರ್ಭಗಳಲ್ಲೂ, ವಿಮಾದಾರಳು ಮಾತೃತ್ವದ ಹಿತಲಾಭಕ್ಕೆ ಕೋರಿಕೆ ನೀಡಿದ ಅವಧಿಯಲ್ಲಿ ವೇತನಕ್ಕಾಗಿ ಕೆಲಸ ಮಾಡಿಲ್ಲವಾದಲ್ಲಿ ಮಾತ್ರ ಮಾತೃತ್ವದ ಹಿತಲಾಭ ಪಾವತಿಸಲಾಗುತ್ತದೆ. ಇದರಲ್ಲಿ ಯಾವುದೇ ನಿರೀಕ್ಷೆಯ ದಿನಗಳು ಇರುವುದಿಲ್ಲ.

### 45. ಮಾತೃತ್ವದ ಹಿತಲಾಭಕ್ಕೆ ಕೋರಿಕೆ ಸಲ್ಲಿಸುವುದು ಹೇಗೆ ?

☞ ಪ್ರಸವ ಅಥವಾ ಗರ್ಭಪಾತದ ನಂತರ ಮಾತೃತ್ವದ ಹಿತಲಾಭ ಕೋರಬಯಸುವ ಮಹಿಳೆಯು ವಿಮಾ ವೈದ್ಯಾಧಿಕಾರಿ/ವೃತ್ತಿನಿರತ ವಿಮಾ ವೈದ್ಯರಿಂದ ಪ್ರಸವ ಅಥವಾ ಗರ್ಭಪಾತದ ಬಗ್ಗೆ ಪ್ರಮಾಣ ಪತ್ರ ಪಡೆಯಬೇಕು ಹಾಗೂ ಅದನ್ನು ಕೋರಿಕೆ ಪತ್ರದೊಂದಿಗೆ ವೈಯಕ್ತಿಕವಾಗಿ ಅಥವಾ ಅಂಚೆ ಮೂಲಕವಾಗಿ ಶಾಖಾ ಕಛೇರಿಗೆ ತಲುಪಿಸಬೇಕು. ಕೋರಿಕೆ ಪತ್ರವು ಕೆಲಸಕ್ಕೆ ಹಾಜರಾಗದಿರುವ ಬಗ್ಗೆ ಘೋಷಣೆಯನ್ನೂ ಹೊಂದಿರುತ್ತದೆ.

ಒಂದು ವೇಳೆ ಹೆರಿಗೆಗೆ ಮುಂಚೆ ಹಿತಲಾಭವನ್ನು ಪಡೆಯಬಯಸಿದಲ್ಲಿ, ಒಂದು ಸೂಚನೆ ಮತ್ತು ಗರ್ಭಧಾರಣೆ ಬಗ್ಗೆ ಪ್ರಮಾಣ ಪತ್ರ ಮತ್ತು ಸಂಭಾವ್ಯ ಹೆರಿಗೆ ದಿನಾಂಕದ ಬಗ್ಗೆ ಪ್ರಮಾಣ ಪತ್ರವನ್ನು ಸಹ ವಿಮಾ ವೈದ್ಯಾಧಿಕಾರಿ/ ವೃತ್ತಿನಿರತ ವಿಮಾ ವೈದ್ಯರಿಂದ ಪಡೆದು ಶಾಖಾ ಕಛೇರಿಗೆ ಸಲ್ಲಿಸಬೇಕು.

ವಿಮಾದಾರಳು ಮಗುವನ್ನು ಹೆತ್ತು ಮರಣ ಹೊಂದಿದ ಸಂದರ್ಭದಲ್ಲಿ ಅವಳ ನಾಮಿನಿ (ನಾಮಕರಣಗೊಂಡ ವ್ಯಕ್ತಿ) ನಾಮಿನಿ ಇಲ್ಲದಿದ್ದ ಪಕ್ಷದಲ್ಲಿ ಅವಳ ಶಾಸನಬದ್ಧ ಪ್ರತಿನಿಧಿ ಮಾತೃತ್ವದ ಹಿತಲಾಭದ ಕೋರಿಕೆಯನ್ನು ವೈಯಕ್ತಿಕವಾಗಿ ಅಥವಾ ಅಂಚೆಮೂಲಕ ಮೃತವಿಮಾದಾರಳ ಮಾತೃತ್ವದ ಹಿತಲಾಭದ ಕೋರಿಕೆ ಪತ್ರವನ್ನು ವಿಮಾದಾರಳ ಮರಣದ ಪ್ರಮಾಣ ಪತ್ರದ ಜೊತೆಗೆ ಶಾಖಾ ಕಛೇರಿಗೆ ಸಲ್ಲಿಸಬೇಕು.

ವಿಮಾದಾರಳು ಗರ್ಭಾವಸ್ಥೆ / ಹೆರಿಗೆ / ಗರ್ಭಪಾತ / ಅವಧಿಗೆ ಮುನ್ನ ಮಗುವಿನ ಜನನದ ಕಾರಣದಿಂದಾಗಿ ಕಾಯಿಲೆ ಬಿದ್ದು ಆ ಕಾರಣದಿಂದಾಗಿ ಮಾತೃತ್ವದ ಹಿತಲಾಭವನ್ನು ಪಡೆಯ ಬಯಸಿದಲ್ಲಿ ಕಾಯಿಲೆ ಹಿತಲಾಭಕ್ಕೆ ಕೋರಿಕೆ ಸಲ್ಲಿಸುವಂತೆಯೇ ಈ ಹಿತಲಾಭಕ್ಕೂ ಕೋರಿಕೆ ಸಲ್ಲಿಸಬೇಕು.

ಮಾತೃತ್ವದ ಹಿತಲಾಭದ ಕೋರಿಕೆ ಜೊತೆಗೆ ಮೇಲೆ ನಮೂದಿಸಿರುವ ನಿಗದಿತ ಪ್ರಮಾಣ ಪತ್ರಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ನಿಗಮವು ಬದಲಿಗೆ ಬೇರೆ ಸಾಕ್ಷ್ಯಗಳನ್ನು ಪರಿಗಣಿಸುವ ವಿವೇಚನಾಧಿಕಾರ ಹೊಂದಿರುತ್ತದೆ.

### 46. ವೈದ್ಯಕೀಯ ಬೋನಸ್ ಎಂದರೇನು ?

☞ ವಿಮಾದಾರಳು ಅಥವಾ ವಿಮಾದರನ ಪತ್ನಿಯು ಒಂದುವೇಳೆ ಹೆರಿಗೆ ಸಂದರ್ಭದಲ್ಲಿ ಇಎಸ್ಐ ಆಸ್ಪತ್ರೆಯ ವೈದ್ಯಕೀಯ ಸೌಲಭ್ಯವನ್ನು ಪಡೆಯದಿದ್ದಲ್ಲಿ ನಗದು ರೂಪದಲ್ಲಿ ನೀಡಲಾಗುವ ಒಟ್ಟು ಮೊತ್ತವನ್ನು ವೈದ್ಯಕೀಯ ಬೋನಸ್ ಎನ್ನಲಾಗುತ್ತದೆ. 250 ರೂ.ಗಳ ಈ ಬೋನಸ್ ಅನ್ನು ದಿನಾಂಕ 1.4.2003 ರಿಂದ 1000 ರೂ.ಗಳಿಗೆ ಏರಿಸಲಾಗಿದೆ.

### 47. ವೈದ್ಯಕೀಯ ಹಿತಲಾಭ ಎಂದರೇನು ?

☞ ವೈದ್ಯಕೀಯ ಹಿತಲಾಭ ಅನ್ವಯವಾಗುವ ಪ್ರದೇಶಗಳಲ್ಲಿ ವಿಮಾದಾರ ಹಾಗೂ ಆತನ / ಅವಳ ಕುಟುಂಬಕ್ಕೆ ನೀಡಲಾಗುವ ವೈದ್ಯಕೀಯ ಸೇವೆಯನ್ನು ವೈದ್ಯಕೀಯ ಹಿತಲಾಭ ಎನ್ನಲಾಗುತ್ತದೆ.

### 48. ವೈದ್ಯಕೀಯ ಹಿತಲಾಭದಲ್ಲಿ ಏನೆಲ್ಲಾ ಸೇರಿರುತ್ತದೆ ?

☞ ಮಾನಕ / ನಿಗದಿತ ವೈದ್ಯಕೀಯ ಸೇವೆಯಲ್ಲಿ ಹೊರ ರೋಗಿ ಚಿಕಿತ್ಸೆ, ಒಳರೋಗಿ ಚಿಕಿತ್ಸೆ, ಅವಶ್ಯಕ ಔಷಧಿ - ಡ್ರೆಸ್ಸಿಂಗ್‌ಗಳು, Pathological, rediological ತಜ್ಞರ ಸಲಹೆ - ಸೇವೆ, ಶಿಶುವಿನ ಜನನ ಪೂರ್ವದ ಹಾಗೂ ನಂತರದ ವೈದ್ಯಕೀಯ ಸೇವೆ, ತುರ್ತು ಚಿಕಿತ್ಸೆ ಇತ್ಯಾದಿ ಸೇರಿವೆ.

### 49. ಹೊರರೋಗಿ ಚಿಕಿತ್ಸೆಗಳು ಎಲ್ಲೆಲ್ಲಿ ದೊರಕುತ್ತವೆ ?

☞ ಹೊರರೋಗಿ ವೈದ್ಯಕೀಯ ಚಿಕಿತ್ಸೆಯು ರಾಜ್ಯ ವಿಮಾ ಚಿಕಿತ್ಸಾಲಯಗಳಲ್ಲಿ ಅಥವಾ ಪೂರ್ಣಾವಧಿ ವೈದ್ಯರುಗಳಿಂದ ನಿರ್ವಹಿಸಲ್ಪಡುವ ಸಂಚಾರಿ ಚಿಕಿತ್ಸಾಲಯಗಳಲ್ಲಿ (ಸೇವಾ ವ್ಯವಸ್ಥೆ) ಅಥವಾ ವೃತ್ತಿನಿರತ ವಿಮಾ ವೈದ್ಯರುಗಳು ನಡೆಸುವ ಖಾಸಗಿ ಚಿಕಿತ್ಸಾಲಯಗಳಲ್ಲಿ ನೀಡಲಾಗುತ್ತದೆ. ಈ ವೈದ್ಯಕೀಯ ಸೇವೆಯ ವ್ಯಾಪ್ತಿಯಲ್ಲಿ ಮಹಿಳೆಯರಿಗೆ ಸಾಮಾನ್ಯವಾದ ಶಿಶುವಿನ ಜನನ ಪೂರ್ವದ ಹಾಗೂ ನಂತರದ ಸೇವೆಗಳು, ಕುಟುಂಬ ಕಲ್ಯಾಣ ಯೋಜನಾ ಸೇವೆಗಳು ಮತ್ತು ಸಾಮಾನ್ಯವಾಗಿ ಹರಡುವ ಅಂಟುರೋಗಗಳ ರೋಗ ನಿರೋಧಕ ಚುಚ್ಚು ಮದ್ದು ಸಹ ಸೇರಿರುತ್ತದೆ.

ಈ ಯೋಜನೆಯು ವೃತ್ತಿಗಾಯದಿಂದಾಗಿ ಅಥವಾ ಕೆಲವು ವಿಶೇಷ ಸಂದರ್ಭಗಳಲ್ಲಿ ತಮ್ಮ ಕೈಕಾಲುಗಳಲ್ಲಿ ಕಳೆದುಕೊಂಡ ವಿಮಾದಾರರಿಗೆ ನಿಗಮದ ಪೂರ್ಣ ವೆಚ್ಚದಲ್ಲಿ ಕೃತಕ ಕೈಕಾಲುಗಳನ್ನು ನೀಡುತ್ತದೆ ಹಾಗೂ ವೃತ್ತಿಗಾಯದಿಂದ ಹಲ್ಲು ಕಳೆದುಕೊಂಡವರಿಗೆ, ದೃಷ್ಟಿದೋಷ ಉಂಟಾದರೆ ಅಥವಾ ಶ್ರವಣ ದೋಷ ಉಂಟಾದಲ್ಲಿ ಕ್ರಮವಾಗಿ ಕೃತಕ ದಂತಪಂಕ್ತಿ, ಕನ್ನಡಕ ಮತ್ತು ಶ್ರವಣ ಸಾಧನ (ಹಿಯರಿಂಗ್ ಏಡ್) ನೀಡಲಾಗುತ್ತದೆ.

### 50. ಒಳರೋಗಿ ಸೇವೆಯನ್ನು ಹೇಗೆ ಮತ್ತು ಎಲ್ಲಿ ನೀಡಲಾಗುತ್ತದೆ ?

☞ ಇಎಸ್‌ಐ ನಿಗಮವು ದೇಶಾದ್ಯಂತ 141 ಆಸ್ಪತ್ರೆಗಳ ಜಾಲವನ್ನು ಹೊಂದಿದೆ. ಇವುಗಳಲ್ಲಿ ಹೆಚ್ಚಿನ ಆಸ್ಪತ್ರೆಗಳು ರಾಜ್ಯ ಸರ್ಕಾರಗಳ ನಿರ್ವಹಣೆಯಲ್ಲಿವೆ. ಈ ಆಸ್ಪತ್ರೆಗಳಲ್ಲಿ ಒಳರೋಗಿ ಚಿಕಿತ್ಸೆ ಹಾಗೂ ರೋಗ ಪತ್ತೆ ಹಚ್ಚುವ ಸೇವೆಗಳು ಲಭ್ಯವಿವೆ ಮಾರಕ ಖಾಯಿಲೆಗಳಿಗಾಗಿ ಮುಂದುವರಿದ ಸುಧಾರಿತ ಚಿಕಿತ್ಸೆ ಮತ್ತು ಕ್ಲಿಷ್ಟಶಸ್ತ್ರಚಿಕಿತ್ಸೆಗಳಿಗಾಗಿ ರಾಜ್ಯ ಯೋಜನೆಗಳು ಅನೇಕ ವೈದ್ಯಕೀಯ ಕಾಲೇಜುಗಳು, ಪ್ರಮುಖ ರಾಜ್ಯ ಆಸ್ಪತ್ರೆಗಳು ಹಾಗೂ ಖಾಸಗಿ ಆಸ್ಪತ್ರೆಗಳೊಂದಿಗೆ ಹೊಂದಾಣಿಕೆ / ಒಪ್ಪಂದ ಮಾಡಿಕೊಂಡಿವೆ.



11345

## 51. ರೋಗ ನಿರೋಧಕ ಆರೋಗ್ಯ ಸೇವೆಗಳು ಕೂಡಾ ಲಭ್ಯವಿವೆಯೇ ?

☞ ಇಎಸ್‌ಐ ಯೋಜನೆಯು ತನ್ನ ಚಿಕಿತ್ಸಾಲಯಗಳು ಮತ್ತು ಆಸ್ಪತ್ರೆಗಳ ಜಾಲದ ಮೂಲಕ ರೋಗ ನಿರೋಧಕ ಆರೋಗ್ಯ ಸೇವೆಯನ್ನು ನೀಡುತ್ತದೆ. ಇದರಲ್ಲಿ ಕೆಲವು ಮಾರಕ ರೋಗಗಳ ವಿರುದ್ಧ ರೋಗ ನಿರೋಧಕ ಚುಚ್ಚುಮದ್ದು ನೀಡುವುದು, ಪೋಲಿಯೋ ಲಸಿಕೆ ನೀಡುವುದು ಮತ್ತು ಕುಟುಂಬ ಕಲ್ಯಾಣ ಸೇವೆ ನೀಡುವುದು ಇತ್ಯಾದಿ ಸೇರಿವೆ. ಈ ಯೋಜನೆಯು ರಾಷ್ಟ್ರದ ಎಲ್ಲಾ ಪ್ರಮುಖ ರೋಗ ನಿರೋಧಕ ಆರೋಗ್ಯ ಸೇವಾ ಆಂದೋಲನಗಳಲ್ಲಿ ಸಹ ಭಾಗವಹಿಸುತ್ತದೆ.

## 52. ವೈದ್ಯಕೀಯ ಹಿತಲಾಭವನ್ನು ಎಷ್ಟು ದಿನಗಳವರೆಗೆ ನೀಡಲಾಗುತ್ತದೆ ?

☞ ಇಎಸ್‌ಐ ಯೋಜನೆ ಸೇರಿದ ಪ್ರಥಮ ದಿನದಿಂದಲೇ ವಿಮಾದಾರ ಹಾಗೂ ಅವನ/ಳ ಕುಟುಂಬದವರು ವೈದ್ಯಕೀಯ ಹಿತಲಾಭಕ್ಕೆ / ವೈದ್ಯಕೀಯ ಸೇವೆಗೆ ಅರ್ಹರಾಗುತ್ತಾರೆ. ವೈದ್ಯಕೀಯ ಸೇವೆಯಲ್ಲಿ ಪ್ರಾಥಮಿಕ ಆರೋಗ್ಯಸೇವೆ, ರೋಗ ಪತ್ತೆ ಹಚ್ಚುವ ಸೇವೆ, ತಜ್ಞರ ಸಲಹೆ ಮತ್ತು ಒಳರೋಗಿ ಚಿಕಿತ್ಸೆ ಸೇರಿವೆ. ರೋಗಿಯು ನಡೆಯಲಾರದ ಸ್ಥಿತಿಯಲ್ಲಿರುವ ಸಂದರ್ಭದಲ್ಲಿ ಅಂಬ್ಯುಲೆನ್ಸ್ ಸೇವೆಯನ್ನು ಸಹ ಒದಗಿಸಲಾಗುವುದು. ವಿಮಾದಾರ ಅಥವಾ ಅವನ/ಳ ಕುಟುಂಬದ ಸದಸ್ಯರು ಈ ಯಾವುದೇ ಸೇವೆಗಳಿಗೆ ಹಣ ನೀಡುವ ಅವಶ್ಯಕತೆ ಇರುವುದಿಲ್ಲ.

ಮೊದಲ ಬಾರಿ ಈ ಯೋಜನೆಗೆ ಒಳಪಡುವ ಒಬ್ಬ ಕಾರ್ಮಿಕ ಮೂರು ತಿಂಗಳ ಅವಧಿಗೆ ವೈದ್ಯಕೀಯ ಹಿತಲಾಭಕ್ಕೆ / ವೈದ್ಯಕೀಯ ಸೇವೆಗೆ ಅರ್ಹನಾಗಿರುತ್ತಾನೆ. ಅವನು / ಅವಳು ನೌಕರಿಯಲ್ಲಿ ಮೂರು ತಿಂಗಳು ಅಥವಾ ಹೆಚ್ಚಿನ ಅವಧಿಯಲ್ಲಿ ಮುಂದುವರಿದಲ್ಲಿ ವೈದ್ಯಕೀಯ ಹಿತಲಾಭವು ಪ್ರಥಮ ಹಿತಲಾಭದ ಅವಧಿಯ ಪ್ರಾರಂಭದವರೆಗೆ ದೊರಕುತ್ತದೆ. ಅವನು/ಳು ಕನಿಷ್ಠ 78 ದಿನಗಳ ವಂತಿಗೆಯನ್ನು ಒಂದು ವಂತಿಗೆ ಅವಧಿಯಲ್ಲಿ ನೀಡಿದರೆ ಸಂಬಂಧಿತ ಹಿತಲಾಭದ ಅವಧಿಯ ಕೊನೆಯವರೆಗೆ ವೈದ್ಯಕೀಯ ಹಿತಲಾಭಕ್ಕೆ ಅರ್ಹತೆ ಇರುತ್ತದೆ.

ಒಬ್ಬ ಕಾರ್ಮಿಕನು ಈ ಕಾಯಿದೆಯಡಿ ಸೂಚಿಸಿರುವ 34 ದೀರ್ಘಾವಧಿ ಕಾಯಿಲೆಗಳಲ್ಲಿ ಯಾವುದೇ ಕಾಯಿಲೆಯಿಂದ ನರಳುತ್ತಿದ್ದಲ್ಲಿ ವಿಸ್ತರಿತ ಕಾಯಿಲೆ ಹಿತಲಾಭಕ್ಕೆ ಅರ್ಹನಾಗಿರುತ್ತಾನೆ. ಈ ಹಿತಲಾಭವು ಆ ಕಾರ್ಮಿಕನು ಕನಿಷ್ಠ ಎರಡು ವರ್ಷಗಳವರೆಗೆ ಇಎಸ್‌ಐ ಕಾಯ್ದೆ ವ್ಯಾಪ್ತಿಯಲ್ಲಿದ್ದು ಕನಿಷ್ಠ 156 ದಿನಗಳಿಗೆ ವಂತಿಗೆಯನ್ನು ನೀಡಿದ್ದಲ್ಲಿ ಮಾತ್ರ ಲಭ್ಯವಾಗುತ್ತದೆ. ಈ ಷರತ್ತುಗಳು ಈಡೇರಿದ್ದ ಪಕ್ಷದಲ್ಲಿ ಕಾರ್ಮಿಕನು ವಿಸ್ತರಿತ ಹಿತಲಾಭಕ್ಕೆ ಅರ್ಹನಾಗಿರುತ್ತಾನೆ ಮತ್ತು ಆಗ ಅವನಿಗೆ/ಳಿಗೆ ಮತ್ತು ಅವನ/ಳ ಕುಟುಂಬಕ್ಕೆ 730 ದಿನಗಳ ಅವಧಿಯವರೆಗೆ ವೈದ್ಯಕೀಯ ಹಿತಲಾಭವು ಲಭ್ಯವಾಗುತ್ತದೆ.

## ಅಂತ್ಯಕ್ರಿಯೆ ವೆಚ್ಚಗಳು

### 53. ಅಂತ್ಯಕ್ರಿಯೆ ವೆಚ್ಚಗಳು ಎಂದರೇನು ?

☞ ವಿಮಾದಾರನು ಮರಣ ಹೊಂದಿದಾಗ ಅವನ ಅಂತ್ಯಕ್ರಿಯೆಯ ವೆಚ್ಚಗಳಿಗಾಗಿ ನೀಡಲಾಗುವ ಹಣವನ್ನು ಅಂತ್ಯಕ್ರಿಯೆ ವೆಚ್ಚಗಳು ಎನ್ನುತ್ತಾರೆ.

### 54. ಎಷ್ಟು ಮೊತ್ತದ ಹಣವನ್ನು ನೀಡಲಾಗುತ್ತದೆ ?

☞ ಒಟ್ಟು ಮೊತ್ತವು ರೂ.2500/-ಕ್ಕೆ ಮೀರದಂತೆ ಅಂತ್ಯಕ್ರಿಯೆಗಾಗಿ ಖರ್ಚುಮಾಡಲಾದ ವಾಸ್ತವಿಕ ಮೊತ್ತಕ್ಕೆ ಸಮವಾದ ಮೊತ್ತವನ್ನು ಮೃತ ವಿಮಾದಾರನ ಅಂತ್ಯಕ್ರಿಯೆಗಾಗಿ ನೀಡಲಾಗುತ್ತದೆ. ಅಂದರೆ ಅಂತ್ಯಕ್ರಿಯೆಗಾಗಿ ಮಾಡಲಾದ ವಾಸ್ತವಿಕ ವೆಚ್ಚ ಅಥವಾ ರೂ. 2500/- (ಯಾವುದು ಕಡಿಮೆಯೋ)ನ್ನು ನೀಡಲಾಗುತ್ತದೆ.

### 55. ಈ ಸಂಬಂಧ ಏನಾದರೂ ವಂತಿಗೆ ನಿಯಮಗಳಿವೆಯೇ ?

☞ ಈ ಸಂಬಂಧ ಯಾವುದೇ ವಂತಿಗೆ ನಿಯಮಗಳಿರುವುದಿಲ್ಲ. ಇದರಲ್ಲಿ ಇರುವ ಒಂದೇ ಶರತ್ತೆಂದರೆ ಮೃತ ವ್ಯಕ್ತಿಯು ಮರಣದ ಸಮಯದಲ್ಲಿ ವಿಮಾಕೃತ ವ್ಯಕ್ತಿಯಾಗಿರಬೇಕು. ಹಾಗಾಗಿ ಶಾಶ್ವತ ಅಂಗವಿಕಲತೆಯ ಹಿತಲಾಭವನ್ನು ಪಡೆಯುತ್ತಿರುವ ವಿಮಾಕೃತ ವ್ಯಕ್ತಿಯು ತನ್ನ ಮರಣದ ಸಮಯದಲ್ಲಿ ಇಎಸ್‌ಐ ಕಾಯ್ದೆ ವ್ಯಾಪ್ತಿಯಲ್ಲಿರುವ ಯಾವುದೇ ಕಾರ್ಖಾನೆ/ಸಂಸ್ಥೆಯಲ್ಲಿ ಕೆಲಸ ಮಾಡುತ್ತಿಲ್ಲವಾದರೂ ಅಂತ್ಯಕ್ರಿಯೆ ವೆಚ್ಚಗಳನ್ನು ನೀಡಲಾಗುತ್ತದೆ.

### 56. ಅಂತ್ಯಕ್ರಿಯೆ ವೆಚ್ಚಗಳನ್ನು ಯಾರಿಗೆ ನೀಡಲಾಗುತ್ತದೆ ?

☞ ಮೃತ ವಿಮಾಕೃತ ವ್ಯಕ್ತಿಯ ಕುಟುಂಬದ ಬದುಕಿರುವ ಅತ್ಯಂತ ಹಿರಿಯ ಸದಸ್ಯನಿಗೆ ಈ ವೆಚ್ಚಗಳನ್ನು ನೀಡಲಾಗುತ್ತದೆ. ಮೃತ ವಿಮಾಕೃತ ವ್ಯಕ್ತಿಗೆ ಕುಟುಂಬವಿರದಿದ್ದ ಪಕ್ಷದಲ್ಲಿ ಅಥವಾ ಮರಣದ ಸಮಯದಲ್ಲಿ ಆತ ತನ್ನ ಕುಟುಂಬದವರೊಡನೆ ವಾಸಿಸುತ್ತಿಲ್ಲವಾದಲ್ಲಿ ಈ ವೆಚ್ಚಗಳನ್ನು ಯಾರು ಮೃತನ ಅಂತ್ಯಕ್ರಿಯೆಗಾಗಿ ಹಣವೆಚ್ಚ ಮಾಡಿರುತ್ತಾರೋ ಅವರಿಗೆ ನೀಡಲಾಗುತ್ತದೆ.

### 57. ಅಂತ್ಯಕ್ರಿಯ ವೆಚ್ಚಗಳಿಗೆ ಕೋರಿಕೆ ಸಲ್ಲಿಸುವುದು ಹೇಗೆ ?

☞ ಮೃತ ವಿಮಾದಾರನು/ಳು ಮೃತನಾದ ಮೂರು ತಿಂಗಳೊಳಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ಕೋರಿಕೆ ಸಲ್ಲಿಸುವ ವ್ಯಕ್ತಿಯು ತನ್ನ ಕೋರಿಕೆಯನ್ನು ವೈಯಕ್ತಿಕವಾಗಿ ಅಥವಾ ಅಂಚೆ ಮೂಲಕವಾಗಿ ಸಂಬಂಧಿತ ಶಾಖಾ ಕಾರ್ಯಾಲಯಕ್ಕೆ ಈ ಕೆಳಗಿನ ದಾಖಲಾತಿಗಳೊಡನೆ ಸಲ್ಲಿಸಬೇಕು.

ಅ) ವಿಮಾ ವೈದ್ಯಾಧಿಕಾರಿ/ವೃತ್ತಿನಿರತ ವಿಮಾ ವೈದ್ಯ ಅಥವಾ ವಿಮಾಕೃತ ವ್ಯಕ್ತಿಯ ಸಾವಿನ ಸಮಯದಲ್ಲಿ ಅವನಿಗೆ ವೈದ್ಯಕೀಯ ಸೇವೆಯಿಂದ ಆಸ್ಪತ್ರೆ ಅಥವಾ ಸಂಸ್ಥೆಯ ವೈದ್ಯಾಧಿಕಾರಿ ಅಥವಾ ವಿಮಾಕೃತ ವ್ಯಕ್ತಿಯ ಮೃತ ಶರೀರವನ್ನು ಪರೀಕ್ಷಿಸಿದ ವೈದ್ಯಾಧಿಕಾರಿ ನೀಡಿದ ಮರಣದ ಪ್ರಮಾಣ ಪತ್ರ ಅಂತ್ಯಸಂಸ್ಕಾರ/ಸಮಾಧಿಗೊಳಿಸಿದ ಪ್ರದೇಶದ ಅಥವಾ ಪುರಸಭಾ ಅಧಿಕಾರಿಗಳು ಅಥವಾ ಗ್ರಾಮದ ಅಧಿಕಾರಿಗಳು ನೀಡಿವ ಮರಣದ ಪ್ರಮಾಣ ಪತ್ರ ಅಥವಾ ಗ್ರಾಮದ ದೃಢೀಕೃತ ಮರಣದ ದಾಖಲೆಗಳನ್ನು ಸಹ ಮರಣದ ಸಾಕ್ಷ್ಯವಾಗಿ ಅಂಗೀಕರಿಸಲಾಗುತ್ತದೆ.

ಆ) ಅಂತ್ಯಕ್ರಿಯ ವೆಚ್ಚಕ್ಕೆ ಕೋರಿಕೆ ಸಲ್ಲಿಸುವವರು ಈ ಕೆಳಗಿನಂತೆ ಘೋಷಿಸಬೇಕು.

i) ತಾನು ಕುಟುಂಬದ ಬದುಕುಳಿದ ಅತ್ಯಂತ ಹಿರಿಯ ಸದಸ್ಯ ಹಾಗೂ ಮೃತರ ಅಂತ್ಯಕ್ರಿಯೆಯ ವೆಚ್ಚವನ್ನು ತಾನು ಭರಿಸಿರುವ ಬಗ್ಗೆ ಅಥವಾ

ii) ಒಂದು ವೇಳೆ ಕೋರಿಕೆ ಸಲ್ಲಿಸುವಾತ ಕುಟುಂಬದ ಬದುಕುಳಿದ ಹಿರಿಯ ಸದಸ್ಯನಾಗಿಲ್ಲದಿದ್ದ ಪಕ್ಷದಲ್ಲಿ ಮೃತ ವಿಮಾಕೃತ ವ್ಯಕ್ತಿಗೆ ಕುಟುಂಬವಿರದಿದ್ದಲ್ಲಿ ಅಥವಾ ಮೃತ ವ್ಯಕ್ತಿಯು ಮರಣ ಸಮಯದಲ್ಲಿ ತನ್ನ ಕುಟುಂಬದೊಡನೆ ಇರದಿದ್ದಲ್ಲಿ ಮತ್ತು ಕೋರಿಕೆ ಸಲ್ಲಿಸುವಾತನು ಮೃತ ವಿಮಾಕೃತ ವ್ಯಕ್ತಿಯ ಅಂತ್ಯಕ್ರಿಯೆ ವೆಚ್ಚವನ್ನು ತಾನೇ ಭರಿಸಿರುವ ಬಗ್ಗೆ ಘೋಷಣೆ ನೀಡಬೇಕಾಗುತ್ತದೆ. ಈ ಘೋಷಣೆಯು ಯೋಗ್ಯ ಪ್ರಾಧಿಕಾರದಿಂದ ಪ್ರತಿರುಜು ಮಾಡಲ್ಪಟ್ಟಿರಬೇಕು.

## ಇತರ ಕೆಲವು ಸೌಲಭ್ಯಗಳು / ನಿಯಮಗಳು

➢ **ಕೆಲವೊಂದು ಸಂದರ್ಭದಲ್ಲಿ ಹಿತಲಾಭಕ್ಕೆ ಅನರ್ಹನಾಗುವುದು**

ಒಬ್ಬ ವ್ಯಕ್ತಿಯು ಯಾವುದೇ ದಿನದಂದು ಕೆಲಸ ಮಾಡಿ ಅದಕ್ಕೆ ವೇತನವನ್ನು ಪಡೆದಿದ್ದಲ್ಲಿ ಆತನು / ಅವಳು ಆ ದಿನಕ್ಕೆ ಕಾಯಿಲೆ ಹಿತಲಾಭ ಅಥವಾ ಮಾತೃತ್ವದ ಹಿತಲಾಭ ಅಥವಾ ತಾತ್ಕಾಲಿಕ ಅಂಗವಿಕಲತೆಯ ಹಿತಲಭಾಕ್ಕೆ ಅನರ್ಹನಾಗುತ್ತಾನೆ/ಳೆ.

ಕಾಯಿಲೆ ಹಿತಲಾಭ ಅಥವಾ ತಾತ್ಕಾಲಿಕ ಅಂಗವಿಕಲತೆ ಹಿತಲಾಭ ಪಡೆಯುತ್ತಿರುವ ವ್ಯಕ್ತಿಯು ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರಬೇಕು ಹಾಗೂ ವಿಮಾ ವೈದ್ಯಾಧಿಕಾರಿಯ ಆದೇಶಗಳನ್ನು ಪಾಲಿಸಬೇಕು. ಅವನು/ಳು ಚಿಕಿತ್ಸೆ ಪಡೆಯುತ್ತಿರುವ ಪ್ರದೇಶವನ್ನು ವಿಮಾ ವೈದ್ಯಾಧಿಕಾರಿಯ ಅಪ್ಪಣೆಯಿಲ್ಲದೆ ಬಿಡಬಾರದು ಮತ್ತು ವೈದ್ಯಾದಿಕಾರಿ ಅಥವಾ ನಿಗಮದಿಂದ ಸೂಚಿಸಲ್ಪಟ್ಟ ಇನ್ನಾವುದೇ ವ್ಯಕ್ತಿಯೆದುರು ಪರೀಕ್ಷೆಗೆ ಹಾಜರಾಗಬೇಕು.

➢ **ಹಿತಲಾಭ ಪಡೆಯುವ ಹಕ್ಕನ್ನು ರಕ್ಷಿಸುವುದು ಹಾಗೂ ಕಾಪಾಡುವುದು**

ಇಎಸ್‌ಐ ಕಾಯ್ದೆಯ ಅನ್ವಯ ನೀಡಲಾಗುವ ನಗದು ಹಿತಲಾಭಗಳನ್ನು ಜಪ್ತಿಮಾಡಲು ಆಗುವುದಿಲ್ಲ ಅಥವಾ ಯಾವುದೇ ನ್ಯಾಯಾಲಯದ ಆದೇಶದ ಜಾರಿಗಾಗಿ ಮಾರಾಟ ಮಾಡಲು ಆಗುವುದಿಲ್ಲ ಹಾಗೂ ಹಿತಲಾಭ ಪಡೆಯುವ ಹಕ್ಕನ್ನು ಇನ್ನೊಬ್ಬರಿಗೆ ವರ್ಗಾಯಿಸಲಾಗುವುದಿಲ್ಲ ಅಥವಾ ವಹಿಸಿಕೊಡಲಾಗುವುದಿಲ್ಲ.

➢ **ಕೆಲಸದಿಂದ ತೆಗೆದು ಹಾಕುವುದು, ಕೈಬಿಡುವುದು ಅಥವಾ ಇನ್ನಾವುದೇ ಶಿಕ್ಷೆಯಿಂದ ಸುರಕ್ಷೆ.**

ಈ ಕೆಳಕಂಡ ಅವಧಿಯಲ್ಲಿ ಯಾವುದೇ ನೌಕರರನ್ನು ಕೆಲಸದಿಂದ ತೆಗೆದುಹಾಕುವುದು, ಕೈಬಿಡುವುದು ಅಥವಾ ಯಾವುದೇ ಶಿಕ್ಷೆಗಳಿಂದ ವಿಮಾದಾರರಿಗೆ ರಕ್ಷಣೆ ಒದಗಿಸಲಾಗಿದೆ.

i) ಅಂಗವಿಕಲತೆ ಹಿತಲಾಭವನ್ನು ಪಡೆಯುತ್ತಿರುವಾತನಿಗೆ 6 ತಿಂಗಳ ಅವಧಿಯವರೆಗೆ

ii) ಗರ್ಭಾವಸ್ಥೆ ಅಥವಾ ಹೆರಿಗೆಯಿಂದುಂಟಾದ ಕಾಯಿಲೆ ಎಂದು ಪ್ರಮಾಣೀಕೃತವಾದ ಅಸ್ವಸ್ಥತೆಯಿಂದ ನರಲುತ್ತಿರುವ ವಿಮಾದಾರಳಿಗೆ ಆರು ತಿಂಗಳ ಅವಧಿವರೆಗೆ.

iii) ಕ್ಷಯರೋಗ, ಕುಷ್ಟರೋಗ, ಮಾನಸಿಕ ಅಸ್ವಸ್ಥತೆ, ಪೂರಕ ಅಥವಾ ನಿರ್ದಿಷ್ಟ ರೋಗಗಳ ಪಟ್ಟಿಯಲ್ಲಿ ಸೂಚಿಸಲಾದ 34 ಕಾಯಿಲೆಗಳಲ್ಲಿ ಯಾವುದೇ ಕಾಯಿಲೆಯಿಂದ ನರಳುತ್ತಿರುವ ವ್ಯಕ್ತಿಗೆ 12 ತಿಂಗಳ ಅವದಿಯವರೆಗೆ.

➢ **ನಗದು ಹಿತಲಾಭವನ್ನು ನಿಗಮದ ವೆಚ್ಚದಲ್ಲಿ ರವಾನೆ ಮಾಡುವುದು - ನೀಡುವುದು.**

ಫಲಾನುಭವಿಯ ಅಪೇಕ್ಷೆಯ ಮೇರೆಗೆ ಇಎಸ್‌ಐ ಕಾಯ್ದೆಯನ್ವಯ ನೀಡಲಾಗುವ ನಗದು ಹಿತಲಾಭವನ್ನು / ಹಣದ ಮೊತ್ತವನ್ನು, ನಿಗಮದ ವೆಚ್ಚದಲ್ಲಿ ಮನಿ ಆರ್ಡರ್ ಮೂಲಕ ಕಳಿಸಲಾಗುವುದು.

- **ನ್ಯಾಯ ಒದಗಿಸುವ ವ್ಯವಸ್ಥೆ**

ಕೋರಿಕೆದಾರರ ಹಕ್ಕನ್ನು ಬಲಗೊಳಿಸಲು, ಪ್ರತಿಕೋರಿಕೆದಾರನೂ ಕೋರ್ಟ್‌ನಲ್ಲಿ ದಾವೆ ಹೂಡುವ ಹಕ್ಕನ್ನು ಹೊಂದಿದ್ದಾನೆ. ಇದು ರಾಜ್ಯ ಸರ್ಕಾರದಿಂದ ನೇಮಕವಾದ ಒಬ್ಬ ನ್ಯಾಯಾಂಗ ಅಧಿಕಾರಿಯನ್ನು ಹೊಂದಿರುತ್ತದೆ. ಇಂತಹ ಎಲ್ಲಾ ಪ್ರಕರಣಗಳನ್ನೂ ಸಿವಿಲ್ ನ್ಯಾಯಾಲಯದ ವ್ಯಾಪ್ತಿಯಿಂದ ಹೊರಗಿಡಲಾಗಿದೆ.

- **ಹಿತಲಾಭದ ಮೊತ್ತದ ಮರುಪಾವತಿ ಮತ್ತು ವಸೂಲಾತಿ.**

ಯಾರೇ ವ್ಯಕ್ತಿಯು ತಾನು ನ್ಯಾಯಯುತವಾಗಿ ಅರ್ಹನಲ್ಲದ ಯಾವುದೇ ಹಿತಲಾಭವನ್ನು ಪಡೆದಿದ್ದಲ್ಲಿ, ಆತನು ಅಂತಹ ಯಾವುದೇ ಹಿತಲಾಭದ ಮೊತ್ತವನ್ನು ನಿಗಮಕ್ಕೆ ಮರುಪಾವತಿಸ ಬೇಕಾಗುತ್ತದೆ.

- **ನ್ಯಾಯಯುತವಲ್ಲದ ಹಿತಲಾಭವನ್ನು ಪಡೆಯುವ ಉದ್ದೇಶದಿಂದ ತಪ್ಪುಹೇಳಿಕೆ ನೀಡುವುದು ಅಥವಾ ತಪ್ಪು ಪ್ರತಿನಿಧಿತ್ವ ಮಾಡುವುದು ಇತ್ಯಾದಿ.**

ನ್ಯಾಯಯುತವಲ್ಲದ ಹಿತಲಾಭವನ್ನು ಪಡೆಯಲು ಮಾಡಿದ / ಮಾಡಿಸಲ್ಪಟ್ಟ ಯಾವುದೇ ತಪ್ಪು ಹೇಳಿಕೆ ಅಥವಾ ತಪ್ಪು ಪ್ರತಿನಿಧಿತ್ವ ಇಎಸ್ಐ ಕಾಯ್ದೆಯನ್ವಯ ಶಿಕ್ಷಾರ್ಹ ಅಪರಾಧವಾಗಿರುತ್ತದೆ ಹಾಗೂ ಇದಕ್ಕೆ ಮೂರು ತಿಂಗಳವರೆಗೆ ಜೈಲು ಶಿಕ್ಷೆ ಅಥವಾ 500 /-ರೂ.ಗಳ ದಂಡ ಅಥವಾ ಎರಡನ್ನೂ ವಿಧಿಸಬಹುದಾಗಿರುತ್ತದೆ.

- **ಪರಸ್ಥಳಗಳಲ್ಲಿ ವೈದ್ಯಕೀಯ ಚಿಕಿತ್ಸೆ**

ವಿಮಾಕೃತ ವ್ಯಕ್ತಿಯು ಕೆಲಸದ ಮೇಲೆ ಅಥವಾ ಬೇರೆ ಕಾರಣದಿಂದಾಗಲೀ ತನ್ನ ಊರನ್ನು ಬಿಟ್ಟು ಪರಸ್ಥಳಕ್ಕೆ ತೆರಳಿದಾಗ, ತನ್ನ ಉದ್ಯೋಗದಾತರಿಂದ ಫಾರ್ಮ್ -105ರಲ್ಲಿ ನೀಡಲಾದ ಪ್ರಮಾಣಪತ್ರ ಹಾಗೂ ಗುರುತಿನ ಕಾರ್ಡನ್ನು ನೀಡಿ ಅಲ್ಲಿನ ಯಾವುದೇ ಇಎಸ್ಐ ಚಿಕಿತ್ಸಾಲಯದಲ್ಲಿ ಚಿಕಿತ್ಸೆಗೆ ಅರ್ಹನಾಗುತ್ತಾನೆ.

## ಸ್ಟ್ಯಾಂಡರ್ಡ್ ಪರಿಹಾರ ಧನ

### (ಕಾಯಿಲೆ ಹಿತಲಾಭದ ನಿಗದಿತ ದರಗಳು)

ಪರಸ್ಪರ ಸೌಹಾರ್ದಯುತ, ಸಹಕಾರದ ದೃಷ್ಟಿಯಿಂದ ನೀವೂ ಯೋಜಿತ ರೀತಿಯಲ್ಲಿ ಭಾಗವಹಿಸಿರಿ. ಇದರಿಂದಾಗಿ ಸಾಮಾಜಿಕ ಸುರಕ್ಷ ಕಾರ್ಯಕ್ರಮಕ್ಕೆ ಉತ್ತಮ ಅಡಿಗಲ್ಲಾಗುತ್ತದೆ.

| | ದಿನವಹಿ ಸರಾಸರಿ ವೇತನ ರೂ.ಗೆ ಮೇಲ್ಪಟ್ಟು | ರೂ.ಗೆ ಮೀರದಂತೆ | ದಿನವಹಿ ಅಸ್ವಸ್ಥತೆಯ ಆರ್ಥಿಕ ನೆರವಿನ ದರ (ಸ್ಟ್ಯಾಂಡರ್ಡ್ ದರ) |
|---|---|---|---|
| 1. | ರೂ. 28 ಕ್ಕಿಂತ ಕಡಿಮೆ | | ರೂ.14* |
| 2. | ರೂ. 28 ಮತ್ತು ಮೇಲೆ ಹಾಗೂ ರೂ.32 – ಕ್ಕಿಂತ ಕಡಿಮೆ | | ರೂ.16/- |
| 3. | ರೂ. 32 ಮತ್ತು ಮೇಲೆ ಹಾಗೂ ರೂ.36 – ಕ್ಕಿಂತ ಕಡಿಮೆ | | ರೂ.18/- |
| 4. | ರೂ. 36 ಮತ್ತು ಮೇಲೆ ಹಾಗೂ ರೂ.40 – ಕ್ಕಿಂತ ಕಡಿಮೆ | | ರೂ.20/- |
| 5. | ರೂ. 40 ಮತ್ತು ಮೇಲೆ ಹಾಗೂ ರೂ.48 – ಕ್ಕಿಂತ ಕಡಿಮೆ | | ರೂ.24/- |
| 6. | ರೂ. 48 ಮತ್ತು ಮೇಲೆ ಹಾಗೂ ರೂ.56 – ಕ್ಕಿಂತ ಕಡಿಮೆ | | ರೂ.28/- |
| 7. | ರೂ. 56 ಮತ್ತು ಮೇಲೆ ಹಾಗೂ ರೂ.60 – ಕ್ಕಿಂತ ಕಡಿಮೆ | | ರೂ.30/- |
| 8. | ರೂ. 60 ಮತ್ತು ಮೇಲೆ ಹಾಗೂ ರೂ.64 – ಕ್ಕಿಂತ ಕಡಿಮೆ | | ರೂ.32/- |
| 9. | ರೂ. 64 ಮತ್ತು ಮೇಲೆ ಹಾಗೂ ರೂ.72 – ಕ್ಕಿಂತ ಕಡಿಮೆ | | ರೂ.36/- |
| 10. | ರೂ. 72 ಮತ್ತು ಮೇಲೆ ಹಾಗೂ ರೂ.76 – ಕ್ಕಿಂತ ಕಡಿಮೆ | | ರೂ.38/- |
| 11. | ರೂ. 76 ಮತ್ತು ಮೇಲೆ ಹಾಗೂ ರೂ.80 – ಕ್ಕಿಂತ ಕಡಿಮೆ | | ರೂ.40/- |
| 12. | ರೂ. 80 ಮತ್ತು ಮೇಲೆ ಹಾಗೂ ರೂ.88 – ಕ್ಕಿಂತ ಕಡಿಮೆ | | ರೂ.44/- |
| 13. | ರೂ. 88 ಮತ್ತು ಮೇಲೆ ಹಾಗೂ ರೂ.96 – ಕ್ಕಿಂತ ಕಡಿಮೆ | | ರೂ.48/- |
| 14. | ರೂ. 96 ಮತ್ತು ಮೇಲೆ ಹಾಗೂ ರೂ.106 – ಕ್ಕಿಂತ ಕಡಿಮೆ | | ರೂ.53/- |
| 15. | ರೂ. 106 ಮತ್ತು ಮೇಲೆ ಹಾಗೂ ರೂ.116 – ಕ್ಕಿಂತ ಕಡಿಮೆ | | ರೂ.58/- |
| 16. | ರೂ. 116 ಮತ್ತು ಮೇಲೆ ಹಾಗೂ ರೂ.126 – ಕ್ಕಿಂತ ಕಡಿಮೆ | | ರೂ.63/- |
| 17. | ರೂ. 126 ಮತ್ತು ಮೇಲೆ ಹಾಗೂ ರೂ.136 – ಕ್ಕಿಂತ ಕಡಿಮೆ | | ರೂ.68/- |
| 18. | ರೂ. 136 ಮತ್ತು ಮೇಲೆ ಹಾಗೂ ರೂ.146 – ಕ್ಕಿಂತ ಕಡಿಮೆ | | ರೂ.73/- |
| 19. | ರೂ. 146 ಮತ್ತು ಮೇಲೆ ಹಾಗೂ ರೂ.156 – ಕ್ಕಿಂತ ಕಡಿಮೆ | | ರೂ.78/- |
| 20. | ರೂ. 156 ಮತ್ತು ಮೇಲೆ ಹಾಗೂ ರೂ.166 – ಕ್ಕಿಂತ ಕಡಿಮೆ | | ರೂ.83/- |

| | | |
|---|---|---|
| 21. | ರೂ. 166 ಮತ್ತು ಮೇಲೆ ಹಾಗೂ ರೂ.176 - ಕ್ಕಿಂತ ಕಡಿಮೆ | ರೂ.88/- |
| 22. | ರೂ. 176 ಮತ್ತು ಮೇಲೆ ಹಾಗೂ ರೂ.186 - ಕ್ಕಿಂತ ಕಡಿಮೆ | ರೂ.93/- |
| 23. | ರೂ. 186 ಮತ್ತು ಮೇಲೆ ಹಾಗೂ ರೂ.196 - ಕ್ಕಿಂತ ಕಡಿಮೆ | ರೂ.98/- |
| 24. | ರೂ. 196 ಮತ್ತು ಮೇಲೆ ಹಾಗೂ ರೂ.206 - ಕ್ಕಿಂತ ಕಡಿಮೆ | ರೂ.103/- |
| 25. | ರೂ. 206 ಮತ್ತು ಮೇಲೆ ಹಾಗೂ ರೂ.216 - ಕ್ಕಿಂತ ಕಡಿಮೆ | ರೂ.108/- |
| 26. | ರೂ. 216 ಮತ್ತು ಮೇಲೆ ಹಾಗೂ ರೂ.226 - ಕ್ಕಿಂತ ಕಡಿಮೆ | ರೂ.113/- |
| 27. | ರೂ. 226 ಮತ್ತು ಮೇಲೆ ಹಾಗೂ ರೂ.236 - ಕ್ಕಿಂತ ಕಡಿಮೆ | ರೂ.118/- |
| 28. | ರೂ. 236 ಮತ್ತು ಮೇಲೆ ಹಾಗೂ ರೂ.250 - ಕ್ಕಿಂತ ಕಡಿಮೆ | ರೂ.125/- |
| 29. | ರೂ. 250 ಮತ್ತು ಮೇಲೆ ಹಾಗೂ ರೂ.260 - ಕ್ಕಿಂತ ಕಡಿಮೆ | ರೂ.130/- |
| 30. | ರೂ. 260 ಮತ್ತು ಮೇಲೆ ಹಾಗೂ ರೂ.270 - ಕ್ಕಿಂತ ಕಡಿಮೆ | ರೂ.135/- |
| 31. | ರೂ. 270 ಮತ್ತು ಮೇಲೆ ಹಾಗೂ ರೂ.280 - ಕ್ಕಿಂತ ಕಡಿಮೆ | ರೂ.140/- |
| 32. | ರೂ. 280 ಮತ್ತು ಮೇಲೆ ಹಾಗೂ ರೂ. 290 - ಕ್ಕಿಂತ ಕಡಿಮೆ | ರೂ.145/- |
| 33. | ರೂ. 290 ಮತ್ತು ಮೇಲೆ ಹಾಗೂ ರೂ. 300 - ಕ್ಕಿಂತ ಕಡಿಮೆ | ರೂ.150/- |
| 34. | ರೂ. 300 ಮತ್ತು ಮೇಲೆ ಹಾಗೂ ರೂ. 310 - ಕ್ಕಿಂತ ಕಡಿಮೆ | ರೂ.155/- |
| 35. | ರೂ. 310 ಮತ್ತು ಮೇಲೆ ಹಾಗೂ ರೂ. 320 - ಕ್ಕಿಂತ ಕಡಿಮೆ | ರೂ.160/- |
| 36. | ರೂ. 320 ಮತ್ತು ಮೇಲೆ ಹಾಗೂ ರೂ. 330 - ಕ್ಕಿಂತ ಕಡಿಮೆ | ರೂ.165/- |
| 37. | ರೂ. 330 ಮತ್ತು ಮೇಲೆ ಹಾಗೂ ರೂ. 340 - ಕ್ಕಿಂತ ಕಡಿಮೆ | ರೂ.170/- |
| 38. | ರೂ. 340 ಮತ್ತು ಮೇಲೆ ಹಾಗೂ ರೂ. 350 - ಕ್ಕಿಂತ ಕಡಿಮೆ | ರೂ.175/- |
| 39. | ರೂ. 350 ಮತ್ತು ಮೇಲೆ ಹಾಗೂ ರೂ. 360 - ಕ್ಕಿಂತ ಕಡಿಮೆ | ರೂ.180/- |
| 40. | ರೂ. 360 ಮತ್ತು ಮೇಲೆ ಹಾಗೂ ರೂ. 370 - ಕ್ಕಿಂತ ಕಡಿಮೆ | ರೂ.185/- |
| 41. | ರೂ. 370 ಮತ್ತು ಮೇಲೆ ಹಾಗೂ ರೂ. 380 - ಕ್ಕಿಂತ ಕಡಿಮೆ | ರೂ.190/- |
| 42. | ರೂ. 380 ಮತ್ತು ಹಾಗೂ ಮೇಲ್ಪಟ್ಟು | ರೂ.195/- |

ಅಥವಾ ಪೂರ್ಣ ಸರಾಸರಿ ದಿನಗೂಲಿ ಇವೆರಡರಲ್ಲಿ ಯಾವುದು ಕಡಿಮೆಯಾಗುತ್ತದೆಯೋ ಅದನ್ನೇ ಪರಿಗಣಿಸಬೇಕು.

---

ವಿ.ಸೂ. : ಸ್ಟಾಂಡರ್ಡ್ ದರ ಎಂದರೆ ಪ್ರತಿದಿನದ ಗಳಿಕೆಯ ಸರಿ ಸುಮಾರು ಪ್ರತಿಶತ 50ರಷ್ಟು ಎಂದು ಪರಿಗಣಿಸಬಹುದು.

# ಉತ್ತಮ ಹಾಗೂ ಶೀಘ್ರ ಸೇವೆಗಾಗಿ....

## ದಯಮಾಡಿ ನೆನಪಿಡಿ :

- ಸಾಮಾಜಿಕ ಸುರಕ್ಷೆಗೆ ನಿಮ್ಮ ಗುರುತಿನ ಕಾರ್ಡು ವೀಸಾ ಆಗಿರುತ್ತದೆ. ಅದನ್ನು ಹಾಳಾಗದಂತೆ, ಕಳೆದು ಹೋಗದಂತೆ ರಕ್ಷಿಸಿ.
- ಒಂದು ವೇಳೆ ಗುರುತಿನ ಕಾರ್ಡು ಕಳೆದುಹೋದರೂ, ನಿಮ್ಮ ಶಾಖಾ ಕಾರ್ಯಾಲಯಕ್ಕೆ ಚಿಕಿತ್ಸಾಲಯಕ್ಕೆ ವಿಷಯ ತಿಳಿಸಿ.
- ಎಲ್ಲಾ ಕೋರಿಕೆ ಫಾರ್ಮುಗಳನ್ನು ಸರಿಯಾಗಿ ಭರ್ತಿ ಮಾಡಿ. ತಪ್ಪುಗಳನ್ನು ಮಾಡಬೇಡಿ.
- ಶಾಖಾ ಕಾರ್ಯಾಲಯದ ಕ್ಯಾಶ್ ಕೌಂಟರ್ ಬಿಡುವ ಮುನ್ನ ನಿಮ್ಮ ಹಣವನ್ನು ಎಣಿಸಿಕೊಳ್ಳಿ.
- ನಿಮ್ಮ ತಾತ್ಕಾಲಿಕ ಅಂಗವಿಕಲತೆಯ ಅವಧಿ ಮುಗಿದ ತಕ್ಷಣ ವೈದ್ಯಕೀಯ ಮಂಡಳಿಯ ಪರೀಕ್ಷೆಗಾಗಿ ಅರ್ಜಿಸಲ್ಲಿಸಿ.
- ಸಮಯದ ಮೌಲ್ಯ ಅತಿ ಪ್ರಮುಖವಾಗಿರುವ ತುರ್ತು ಸಂದರ್ಭ ಹೊರತುಪಡಿಸಿ, ಸೂಕ್ತ ಚಿಕಿತ್ಸೆ ದೊರಕುವಲ್ಲಿಗೆ ನಿರ್ದೇಶಿಸುವ ವ್ಯವಸ್ಥೆಯ ಕ್ರಮವನ್ನು ಅನುಸರಿಸಿ.
- ನಿಮ್ಮಲ್ಲಿ ಯಾವುದೇ ದೂರುಗಳಿದ್ದಲ್ಲಿ ನಿಮಗೆ ಸಂಬಂಧಪಟ್ಟ ಶಾಖಾ ಕಾರ್ಯಾಲಯದ ವ್ಯವಸ್ಥಾಪಕರು / ಪ್ರಭಾರಿ ವಿಮಾ ವೈದ್ಯಾಧಿಕಾರಿಯವರನ್ನು ಶೀಘ್ರ ಪರಿಹಾರಕ್ಕಾಗಿ ಸಂಪರ್ಕಿಸಿ.
- ಇಎಸ್ಐ ಸಿಬ್ಬಂಧಿಯೊಡನೆ ಸೌಜನ್ಯದಿಂದ ವರ್ತಿಸಿ ಹಾಗೂ ಅವರಿಂದಲೂ ಸೌಜನ್ಯವನ್ನು ನಿರೀಕ್ಷಿಸಿ.

ಪ್ರಕಟಿತ

ಮಹಾನಿರ್ದೇಶಕರ ಪರವಾಗಿ

ಪ್ರಾದೇಶಿಕ ನಿರ್ದೇಶಕರು

ಕಾರ್ಮಿಕರ ರಾಜ್ಯ ವಿಮಾ ನಿಗಮ

ಕರ್ನಾಟಕ



ಬೊಗಸೆಯಷ್ಟು ವಂತಿಗೆಗೆ

ಬುಟ್ಟಿ ತುಂಬಾ ಹಿತಲಾಭಗಳು